Mr. SPEAKER.—There are no more amendments. The question is

"That clauses 31 to 33, both inclusive, stand part of the Bill."

The motion was adopted.

Clauses 31 to 33, both inclusive, were added to the Bill.

Mr. SPEAKER.—The question is :

"That clause 1, the Title and the Preamble stand part of the Bill."

The motion was adopted.

Clause 1, the Title and Preamble were added to the Bill

Motion to pass.

Sri RAMAKRISHNA HEGDE.—I beg to move :

"That the Mysore Co-operative Societies (Amendment) Bill, 1964, as amended, be passed."

Mr. SPEAKER.—The question is :

"That the Mysore Co-operative Societies (Amendment) Bill, 1964, as amended, be passed."

The motion was adopted.

THE CITY OF BANGALORE MUNICIPAL CORPORATION (AMENDMENT) BILL, 1964.

Motion to consider.

Sri Y. RAMACHANDRA (Deputy Minister for Municipal Administration).—I beg to move :

"That the City of Bangalore Municipal Corporation (Amendment) Bill, 1964, be taken into consideration."

Mr. SPEAKER.—Motion moved :

"That the City of Bangalore Municipal Corporation (Amendment) Bill, 1964, be taken into consideration."

ಶ್ರೀ ವೈ. ರಾಮಚಂದ್ರ.—ಮಾನ್ಯ ಅಧ್ಯಕ್ಷರೆ, ನಮ್ಮ ಕಾರ್ಪೊರೇಷನ್ ಕಾನೂನು ಆದುದು ಭಾರತ ಸಂವಿಧಾನ ಜಾರಿಗೆ ಬರುವುದಕ್ಕೆ ಹಿಂದೆ. ಅದರಲ್ಲಿ ಮಹಿಳೆಯರಿಗೆ, ಕಾರ್ಮಿಕರಿಗೆ ವ್ಯಾಪಾರ ಮತ್ತು ವಾಣಿಜ್ಯ ಹಿತಗಳಿಗೆ ಮೀಸಲಾಗಿ ಪ್ರಾತಿನಿಧ್ಯವಿತ್ತು. ಅಲ್ಲದೆ ಆಲ್ಡರ್‌ಮೆನ್‌ಗಳನ್ನು ಆರಿಸಬೇಕೆಂದಿತ್ತು. ಇದು, ಇಂದಿನ ಪರಿಸ್ಥಿತಿಯಲ್ಲಿ ಕಾನೂನಿನಲ್ಲಿರುವುದು ಸೂಕ್ತವಾಗಿ ಕಾಣಲಿಲ್ಲ. ಅದನ್ನು ತೆಗೆದು ಅದಕ್ಕೆ ಬದಲು ಪ್ರತಿಯೊಂದು ಡಿವಿಜನ್ನಿನಲ್ಲಿಯೂ ಚುನಾವಣೆಯಾಗಬೇಕೆಂದು ತಿದ್ದುಪಡಿಯನ್ನು ತರಲಾಗಿದೆ.

(ಶ್ರೀ ವೈ. ರಾಮಚಂದ್ರ)

ಎರಡನೆಯದಾಗಿ, ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಅವರವರ ಜನ ಸಂಖ್ಯೆಗನುಗುಣವಾಗಿ ಸ್ಥಾನಗಳನ್ನು ಮೀಸಲಾಗಿಡುವುದನ್ನೂ ಈ ತಿದ್ದುಪಡಿಯಲ್ಲಿ ತಂದಿದೆ. ಆಮೇಲೆ 1949ನೆಯ ಇಸವಿಯಲ್ಲಿ ಆಗಿನ ಜನಸಂಖ್ಯೆಯ ಮೇಲೆ ನಗರವನ್ನು 50 ಡಿವಿಜನ್‌ಗಳಾಗಿ ಮಾಡಿದ್ದೆವು. ಆಗ ಸುಮಾರು ಐದಾರು ಲಕ್ಷ ಜನಸಂಖ್ಯೆ ಇತ್ತು ಆದರೆ ಈಗ ಸುಮಾರು 12 ಲಕ್ಷ ದಷ್ಟಾಗಿದೆ. ಪ್ರದೇಶವೂ ದೊಡ್ಡದಾಗಿದೆ. ಹೊಸದಾಗಿ ಹೆಚ್ಚಿರುವ ಜನರಿಗೆ ಪ್ರಾತಿನಿಧ್ಯ ಕೊಡು ವುದಕ್ಕೆ ಸ್ಥಾನಗಳನ್ನು ಜಾಸ್ತಿಮಾಡತಕ್ಕ ಅಧಿಕಾರವನ್ನಿಟ್ಟುಕೊಂಡಿದ್ದೇವೆ. ಇನ್ನು ಚುನಾವಣೆಯ ಸಂಬಂಧವಾಗಿ ರೆಪ್ರೆಸೆಂಟೇಷನ್ ಆಫ್ ದಿ ಪೀಪಲ್ಸ್ ಕಾನೂನನ್ನು ಪೂರ್ಣವಾಗಿ ಅಳವಡಿಸಿದ್ದೇವೆ.

ಕೊನೆಯದಾಗಿ, ಖಾಲಿ ಜಾಗಗಳ ಮೇಲೆ ಅದರ ವಿಸ್ತೀರ್ಣದ ಮೇಲೆ ಕಂದಾಯ ಹಾಕು ತ್ತಿದ್ದೆವು, ಈಗ ಅದನ್ನು ಬಿಟ್ಟು ಆದರ ಮಾರ್ಕೆಟ್ ಬೆಲೆಯ ಮೇಲೆ ವಿಧಿಸಬೇಕೆಂದು ಮಾಡಲಾಗಿದೆ. ಅನೇಕರು ಹತ್ತು ಹನ್ನೆರಡು ವರ್ಷಗಳಿಂದ ಮನೆಗಳನ್ನು ಕಟ್ಟದೆ, ಬೇರೆಯವರು ಮನೆಗಳನ್ನು ಕಟ್ಟಲು ಅವಕಾಶವಿಲ್ಲದಂತಾಗಿದೆ. ಇದರಿಂದ ಜನರಿಗೆ ತೊಂದರೆಯಾಗಿದೆ. ಆದುದರಿಂದ ಈ ಕೆಲವು ತಿದ್ದುಪಡಿಗಳನ್ನು ತಂದಿದ್ದೇವೆ, ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾರ್ಕೆಟ್ ಬೆಲೆಯ ಮೇಲೆ ಕಂದಾಯ ವಿಧಿಸಬೇಕೆಂದು ಹೇಳಿದ್ದೀರಿ ಖಾಲಿ ಜಾಗಗಳಿಗೆ, ಕಟ್ಟಡಗಳ ತೆರಿಗೆಯನ್ನು ಕೂಡ ಹೀಗೆಯೇ ಮಾಡುತ್ತೀರ ?

Mr. SPEAKER.—The House will now adjourned and will meet again after half an hour.

———

The House adjourned for recess at Three of the Clock and reassembled at Thirty Minutes past Three of the Clock.

———

[Mr. Speaker in the Chair.]

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ಈ ದಿನ ಬೆಂಗಳೂರು ಸಿಟಿ ಮುನಿಸಿಪಲ್ ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ 1964 ನಮ್ಮ ಮುಂದೆ ಮಾನ್ಯ ಸಚಿವರು ಇಟ್ಟಿದ್ದಾರೆ. ಬೆಂಗಳೂರು ನಗರ ಸ್ಥಾಪನೆ ಮಾಡಿದ ಕೆಂಪೇಗೌಡ ಅವರ ಕಾಲದಿಂದ ಬೆಂಗಳೂರು ನಗರ ಬೆಳೆ ಯುತ್ತಾ ಬಂದಿದೆ. ಈಗ ಬೆಂಗಳೂರು ನಗರವು ಒಂದು ಪವಿತ್ರವಾದ ಗಣ್ಯಸ್ಥಾನ ಪಡೆದಿದೆ. ಬೆಂಗಳೂರು ನಗರವು ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿತ್ತು. ಒಂದು ಸಿವಿಲ್ ಆಂಡ್ ಮಿಲಿಟರಿ ಸ್ಟೇಷನ್ ಇನ್ನೊಂದು ಸಿಟಿ ಮುನಿಸಿಪಾಲಿಟಿ ಎಂದು ಎರಡು ಭಾಗ ಇದ್ದುವು. 1949ನೇ ಇಸವಿ ಡಿಸೆಂಬರನಲ್ಲಿ ಎರಡು ಆಡಳಿತ ಒಂದು ಮಾಡಿ ಮದ್ರಾಸ್ ಮುನಿಸಿಪಲ್ ಕಾರ್ಪೊರೇಷನ್ ಮಾದರಿ ಯಲ್ಲಿ ಬೆಂಗಳೂರು ಸಿಟಿ ಕಾರ್ಪೊರೇಷನ್ ಸ್ಥಾಪನೆಯಾಯಿತು. ಅಂದಿನಿಂದ ಇಂದಿನವರೆಗೆ ಕೆಲಸ ಮಾಡಿಕೊಂಡು ಬಂದು ಜನರಿಗೆ ಸೌಕರ್ಯ ಒದಗಿಸಿಕೊಟ್ಟು ಮುಂದೆ ಬಂದಿದೆ. ಹಣದ ಸೌಕರ್ಯ ವಿಲ್ಲದ ಮೂಲಕ ಕೆಲವು ವರ್ಷ ಬೆಂಗಳೂರು ಪಟ್ಟಣ ಹಿಂದೆ ಬಿದ್ದಿತ್ತು. ಪ್ರತಿ ಮೂರು ವರ್ಷಕ್ಕೆ ಚುನಾವಣೆ ನಡೆದಿದೆ. ಒಂದೆರಡು ಸಲ ಒಂದು ವರ್ಷ ಜೀವದಾನ ಪಡೆದು ಚುನಾವಣೆ ನಡೆದಿವೆ. ಇದುವರೆಗೆ 4 ಎಲೆಕ್ಷನ್ ಮುಗಿದಿದ್ದು ಬರುವ ಡಿಸೆಂಬರನಲ್ಲಿ 5ನೇ ಇಲೆಕ್ಷನ್ನಿನಲ್ಲಿ ಕಾಲಿಡುವವರು ಆಗಿದ್ದೇವೆ. ಮದ್ರಾಸ್ ಮಾದರಿ ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಅನುಸರಿಸಿಕೊಂಡು ಬಂದಿದ್ದರೂ ಕೂಡ ಕೆಲವು ಲೋಪದೋಷಗಳು ಇವೆ. ನಾವು ಕಾರ್ಪೊರೇಷನ್ನಿನಲ್ಲಿ ಆಗಿಂದಾಗ್ಗೆ ಠರಾವು ಮಾಡಿ ಕೆಲವು ಬದಲಾವಣೆಗಳನ್ನು ಅಮೆಂಡ್‌ಮೆಂಟ್ಸ್ ಸರಕಾರದ ಮುಂದೆ ಕಳಿಸಿದ್ದೇವೆ. ಮೈಸೂರು ಸಿಟಿ ಮುನಿಸಿಪಾಲಿಟಿ ಪ್ರೆಸಿಡೆಂಟರಾಗಿದ್ದವರು ಇಂದು ಈ ಇಲಾಖೆಯ ಮಾನ್ಯ ಸಚಿವರು ಆಗಿದ್ದಾರೆ ಎಂಬುದು ನಮ್ಮದೊಂದು ಸೌಭಾಗ್ಯ. ಹಾಗೆಯೇ ಬೆಂಗಳೂರು ನಗರಕ್ಕೆ ಅತಿ ಹೆಚ್ಚು ದೀಪಕೊಟ್ಟು ಬೆಳಕು ಕೊಡುವ ಅವಕಾಶ ಕಲ್ಪಿಸಿಕೊಟ್ಟಂಥ ಶ್ರೀ ವೈ. ರಾಮಚಂದ್ರ ಅವರು ಟ್ಯಾಕ್ಸೇಷನ್ ಫೈನಾನ್ಸ್ ಕಮಿಟಿ ಚೇರ್ಮನ್ ಆಗಿದ್ದು ಮೇಯರ್ ಆಗಿದ್ದು ಬೆಂಗಳೂರು ನಗರ ಅಭಿವೃದ್ಧಿಗಾಗಿ ಬಹಳ ಶ್ರಮಿಸಿದ್ದಾರೆ. ಅವರ ಜೊತೆಯಲ್ಲಿ ಕೆಲಸ ಮಾಡುವ ಅವಕಾಶ ನನಗೆ ದೊರೆತಿತ್ತು. ಅವರ ಕಾಲದಲ್ಲಿ ಬೆಂಗಳೂರು ನಗರದ ಸರ್ವತೋಮುಖ ಅಭಿವೃದ್ಧಿಗೆ ಅವಕಾಶ

ವಾಯಿತು. ಇದನ್ನು ಯಾರೂ ಅಲ್ಲಗಳೆಯಲಾರರು. ಆಲದ ಮರದ ನೆರಳು ಕೊಡುವ ಹಾಗೆ ಬೆಂಗಳೂರು ನಗರ ಎಲ್ಲರಿಗೂ ಆಶ್ರಯಕೊಡುತ್ತಿದೆ. ಇಲ್ಲಿ ಜಾತಿ ಮತ ಭೇದ ಇಲ್ಲ. ಎಲ್ಲ ಪ್ರಾಂತದ ಜನರು ಇಲ್ಲಿಗೆ ಬಂದು ಸೇರಿ ವ್ಯಾಪಾರ ಉದ್ಯೋಗದಲ್ಲಿ ಭಾಗವಹಿಸಿ ತಮ್ಮ ಬಾಳುವೆ ಸಾಗಿಸಿಕೊಂಡು ಬರುತ್ತಾ ಇದ್ದಾರೆ. ಇತ್ತೀಚೆಗೆ ಬೆಂಗಳೂರು ನಗರದ ಜನಸಂಖ್ಯೆ ಅತಿ ಜಾಸ್ತಿ ಯಾಗಿದೆ. ಬೆಂಗಳೂರು ನಗರದಲ್ಲಿ ವಾಸಕ್ಕೆ ಜಾಗವಿಲ್ಲ. ಇದನ್ನು ಒಂದು ಮೆಟ್ರೊಪೊಲಿಟನ್ ಸಿಟಿ ಮಾಡಬೇಕೆಂದು ಅಕ್ಕಪಕ್ಕದಲ್ಲಿಯ ಗ್ರಾಮಗಳ ಸರ್ವೆ ನಂಬರುಗಳನ್ನು ಸೇರಿಸಿದ್ದಾರೆ. ಅದಕ್ಕೋಸ್ಕರ ಈ ತಿದ್ದುಪಡಿ ಮಸೂದೆ ತಂದಿದ್ದಾರೆ. ಇದರಿಂದ ಬೆಂಗಳೂರು ನಗರಕ್ಕೆ ಬಹಳ ಅನುಕೂಲವಾಗುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 17 ವರ್ಷವಾಯಿತು. ಕಳೆದ 17 ವರ್ಷದಿಂದ ಆಡಳಿತದಲ್ಲಿ ಪ್ರಯೋಗ ಮಾಡುತ್ತಿದ್ದೇವೆ. ಈ ಅನುಭವದಿಂದ ನಾವು ಮುಂದೆ ಹೋಗ ಬೇಕಾಗಿದೆ. ನಮ್ಮ ಆಡಳಿತದಲ್ಲಿ ಕೋಮುವಾರ ಭಾವನೆ ಪಾರ್ಟಿ ಭಾವನೆ ಬೆಳೆಯಬಾರದು. ಅದನ್ನು ಹೋಗಲಾಡಿಸಲು ತಳಪಾಯ ಹಾಕಲು ಈ ಮಸೂದೆ ತಂದಿದ್ದಾರೆ. ಇದು ಬಹಳ ಸ್ತುತ್ಯ ಕಾರ್ಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮನೆಗಳಿಗೆ ದೀಪ, ನೀರಿನ ಸೌಕರ್ಯ ಒಳ್ಳೇರಸ್ತೆ, ಆಸ್ಪತ್ರೆ, ಸ್ಕೂಲು, ಚೊಕ್ಕಟವಾದ ವಾತಾವರಣ ಇರುವುದಕ್ಕೆ ಆಟದ ಮೈದಾನ ಪಾರ್ಕ್ಸ್ ಮುಂತಾದವುಗಳನ್ನು ಜನರಿಗೆ ಒದಗಿಸುವುದು ನಮ್ಮ ನಗರ ಪಿತೃಗಳ ಮತ್ತು ಅಧಿಕಾರಿ ಗಳ ಮುಖ್ಯ ಕರ್ತವ್ಯವಾಗಿದೆ. ಇಂಥ ಸೌಕರ್ಯ ಒದಗಿಸಿ ಕೊಡುವುದರಲ್ಲಿ ಯಾವ ಕೋಮುವಾರು ಭಾವನೆ ಪಕ್ಷ ಭಾವನೆ ಇರಕೂಡದು. ಚುನಾವಣೆಯಾದ ನಂತರ ಅಧಿಕಾರ ಸ್ಥಾನಕ್ಕೆ ಬರುವ ಕೌನ್ಸಿಲರುಗಳು ಮೇಯರ್ ಅವರು ತಂದೆಯೋಪಾದಿಯಲ್ಲಿ ಜನರ ಹಿತವನ್ನು ಕಾಪಾಡಿಕೊಂಡು ಬರಬೇಕು. ಸೌಕರ್ಯ ಒದಗಿಸುವ ಒಳ್ಳೇ ಉದ್ದೇಶ ಇಟ್ಟುಕೊಂಡಿರಬೇಕು. ಇಂಥವರು ಅಧಿ ಕಾರಕ್ಕೆ ಬರುವುದರಿಂದ ದೇಶದಲ್ಲಿ ಭ್ರಷ್ಟಾಚಾರ ಉಳಿಯುವುದಿಲ್ಲ. ಬೆಂಗಳೂರು ನಗರದಲ್ಲಿ 50 ಡಿವಿಜನ್ಸ್ ಇವೆ. ಇದನ್ನು ವಿಸ್ತರಿಸಿ ಎಷ್ಟು ಡಿವಿಜನ್ ಆಗಬೇಕು ಎಂಬುದನ್ನು ತಿಳಿಯಪಡಿಸುವ ಅಧಿಕಾರವನ್ನೂ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಅಷ್ಟು ಡಿವಿಜನ್ನಿಗೂ ಒಬ್ಬರು ಅಥವ ಇಬ್ಬರು ಮೆಂಬರುಗಳನ್ನು ಚುನಾವಣೆ ಮಾಡುವುದಕ್ಕೆ ಅವಕಾಶವಿದೆ. ಇನ್ನೊಂದು ಏನು ಮಾಡಿದ್ದಾರೆಂದರೆ, ಕಾರ್ಮಿಕರಿಗೆ-ಟೆಕ್ಸ್‌ಟೈಲ್ಸ್ ಮತ್ತು ನಾನ್ ಟೆಕ್ಸ್‌ಟೈಲ್ಸ್ ಅಂತ, ಇಷ್ಟು ದಿನ ಸೀಟುಗಳನ್ನು ಕೊಡುತ್ತಾ ಬಂದಿದೆ; ಹಾಗೆಯೇ ಹೆಂಗಸರಿಗೂ ಮತ್ತು ಷೆಡ್ಯೂಲ್ಡ್ ಕ್ಯಾಸ್ಟಿನವ ರಿಗೂ ಸೀಟುಗಳನ್ನು ರಿಜರ್ವ್‌ಮಾಡಿತ್ತು, ಹಾಗೆಯೇ ಆಲ್ಡರ್‌ಮೆನ್ನುಗಳಿಗೂ ಸ್ಥಾನಗಳನ್ನು ಇಷ್ಟರವರೆಗೆ ಮೀಸಲಾಗಿ ಇಟ್ಟುಕೊಂಡು ಬಂದಿದೆ. ಈಗಿರುವವರು ಈ ವರ್ಷ ಆಗುವವರೆಗೆ ಆಲ್ಡರ್‌ಮನ್‌ಗಳಾಗಿ ಮುಂದುವರಿದುಕೊಂಡು ಬರುತ್ತಾರೆ. ಸುಮಾರು 1951ನೇ ಇಸವಿಯಿಂದ ಕಾರ್ಪೊರೇಷನ್ನಿನ ಜನಗಳ ಪ್ರೀತಿ ವಿಶ್ವಾಸದಿಂದ ಚುನಾವಣೆಯಾಗಿ ನಗರಸಭೆಗೆ ಸದಸ್ಯನಾಗಿ ಬಂದಿದ್ದೇನೆ. ಸಾರ್ವಜನಿಕ ಕ್ಷೇತ್ರದಲ್ಲಿ ಜನತೆಯ ಸೇವೆ ಮಾಡುವುದಕ್ಕೆ ಈ ಒಂದು ಅವಕಾಶವನ್ನು ದೇವರು ಕಲ್ಪಿಸಿಕೊಟ್ಟದ್ದು ನನ್ನ ಸುಕೃತ. ಈ 14 ವರ್ಷದ ಸ್ವಲ್ಪ ಅನುಭವದಿಂದ ನಾನು ಕಂಡದ್ದನ್ನು ಹೇಳುವುದಾದರೆ, ಈ ರೀತಿಯ ಕಾರ್ಪೊರೇಷನ್ ರಚನೆಯಿಂದ, ಲೇಬರಿಗೆ, ಟ್ರೇಡ್ ಅಂಡ್ ಕಾಮರ್ಸಿಗೆ, ಅಥವ ಇನ್ನೊಂದು ಬಗೆಯ ಇಂಟರೆಸ್ಟಿಗೆ ಸೀಟು ರಿಜರ್ವ್ ಮಾಡಿಕೊಡು ವುದರಿಂದ ಜನತೆಯಲ್ಲಿ ಮತ್ತು ಕಾರ್ಪೊರೇಷನ್ನಿನ ಆಡಳಿತ ವರ್ಗದಲ್ಲಿ ಸ್ವಲ್ಪ ತಿಕ್ಕಾಟಕ್ಕೆ ಅವಕಾಶ ವಾಗುತ್ತದೆ. ಇದರಿಂದಾಗಿ ಒಂದು ಒಳ್ಳೆಯ ವಾತಾವರಣ ಅಲ್ಲಿ ಇರುವುದಕ್ಕೆ ಅವಕಾಶವಾಗು ವುದಿಲ್ಲ. ಇದರಿಂದ Trade and Commerceಗೂ, Labourಗೂ ಕ್ಲಾಷ್ ಬರುತ್ತದೆ. ಒಂದೊಂದು ಸಲ ಆಲ್ಡರ್‌ಮನ್ನುಗಳಿಗೂ, ಬೇರೆ ಎಲೆಕ್ಟ್ ಆಗಿ ಬಂದ ಮೆಂಬರುಗಳಿಗೂ ಘರ್ಷಣೆ ಬರುತ್ತದೆ. ಭೇದಭಾವನೆ ಇಲ್ಲದ ಸಮಾಜವಾದ ತತ್ವದ ಮೇಲೆ ಒಂದು ರಾಜ್ಯವನ್ನು ಕಟ್ಟ ಬೇಕೆಂದು ಏನು ಹೊರಟಿದ್ದೇವೆಯೋ, ಅದಕ್ಕೆ ಈ ಪದ್ಧತಿ ವಿರುದ್ಧವಾಗಿರುವುದರಿಂದ, ಇವತ್ತಿನ ದಿವಸ ಈ ಅಮೆಂಡ್‌ಮೆಂಟ್ ಬಂದಿದೆ. ಸಮಾಜವಾದ ತತ್ವದ ಮೇಲೆ ರಾಜ್ಯವನ್ನು ಕಟ್ಟುವುದಕ್ಕೆ ಈ ತಿದ್ದುಪಡಿ ಮಸೂದೆ ಕೆಳಗೆ ಆಗುವ ಚುನಾವಣೆಯನ್ನು ಎಕ್ಸ್‌ಪೆರಿಮೆಂಟ್ ಚುನಾವಣೆ ಅಂತ ಹೇಳಿದರೆ ತಪ್ಪಾಗಲಾರದು. ಈ ಚುನಾವಣೆಗೆ ನಿಲ್ಲುವವರು, ದೇಶಸೇವೆ ಮಾಡಿ, ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡಿ, ಎಲ್ಲರ ಪ್ರೀತಿ ವಿಶ್ವಾಸಗಳಿಸಿರಬೇಕು. ಸದಸ್ಯನಾದವನು ಐಶ್ವರ್ಯವಂತ ನಾಗಲಿ, ಕೂಲಿಗಾರನಾಗಲಿ, ಬಡ ಉಪಾಧ್ಯಾಯನಾಗಿರಲಿ, ಒಂದು ಪಾರ್ಟಿಗೆ ಸೇರಿರಲಿ, ಸೇರದೆ ಇರಲಿ, ಯಾವುದೇ ಪ್ರಾಂತ್ಯಕ್ಕೆ ಸೇರಿರಲಿ, ತಾನು ಜನತೆಯ ಸೇವೆ ಮಾಡುವುದಕ್ಕಾಗಿ ಕಾರ್ಪೊರೇಷನ್ನಿಗೆ ಬಂದಿದ್ದೇನೆ ಎಂಬ ಭಾವನೆ ಸದಾ ಇಟ್ಟುಕೊಂಡಿರಬೇಕು. ಅಂಥವರು ಎಲೆಕ್ಟ್ ಆಗಿ ಬಂದರೆ ನಮ್ಮ ಸುಕೃತ. ಇಲ್ಲದೆ ಹೋದರೆ, ಯಾವುದೋ ಒಂದು ಸಂಸ್ಥೆಯ, ಒಂದು ಗ್ರೂಪಿನ ವ್ಯವಹಾರ ಅಲ್ಲಿ ಬರುತ್ತದೆ, ಸಾರ್ವಜನಿಕ ಕ್ಷೇತ್ರದಲ್ಲಿ ಎಲ್ಲರಿಗೂ ಅನುಕೂಲವನ್ನು ಕಲ್ಪಿಸಿಕೊಡುವ ಭಾವನೆ ಬರುವುದಿಲ್ಲ. ಬಡವರೇ ಆಗಿರಲಿ, ಐಶ್ವರ್ಯವಂತರೇ ಆಗಿರಲಿ, ಕೆಳಗಿರುವವರು ಮೇಲಕ್ಕೆ

(ಶ್ರೀ ಕೆ. ದೇವಯ್ಯ)

ಬರಬೇಕು ಎಂಬ ಭಾವನೆ ಇಟ್ಟುಕೊಂಡು ಸೇವೆ ಸಲ್ಲಿಸಿರುವವರಿಗೆ ಅವಕಾಶವಿರಬೇಕು. ಮನಸ್ಸು ಪರಿವರ್ತನೆಯಾದವರು ಕಾರ್ಪೊರೇಷನ್ ಅಂಥ ಸಂಸ್ಥೆಗಳಿಗೆ ಬಂದರೇನೆ ರಾಜ್ಯ ಮುಂದುವರಿಯುವುದು. ಈಗ ಕಾರ್ಪೊರೇಷನ್ ರಚನೆಗೆ ತಂದಿರುವ ಈ ಒಂದು ಅಮೆಂಡ್‌ಮೆಂಟ್ ಏನೊಂದು ಪ್ರಾಬ್ಲಮ್ ಇತ್ತೋ ಅದನ್ನು ಸಾಲ್ವ್ ಮಾಡುತ್ತರೆಂದು ನಾನು ಹೇಳುತ್ತೇನೆ. ಈ ಎಲೆಕ್ಷನ್ನುಗಳಲ್ಲಿ ಯಾರು ನಿಜವಾಗಿ ನಿಷ್ಠಾವಂತರೋ, ಅವರು ಯಾರೇ ಆಗಿರಲಿ-ಐಶ್ವರ್ಯವಂತರಾಗಲಿ, ವ್ಯಾಪಾರಸ್ಥರಾಗಲಿ, ಬಡ ಕೂಲಿಗಾರರಾಗಿರಲಿ, ಯಾರು ಜನತೆಯ ಪ್ರೀತಿ ವಿಶ್ವಾಸವನ್ನು ಗಳಿಸಿದ್ದಾರೋ, ಅಂಥವರನ್ನು ಚುನಾವಣೆ ಮಾಡಿ ಕಳುಹಿಸಿಕೊಟ್ಟರೆ, ಅಲ್ಲಿ ಒಳ್ಳೆಯ ವಾತಾವರಣ ಇರುತ್ತದೆ. ನಮ್ಮ ಆಲ್ಡರ್‌ಮೆನ್ನುಗಳು ಕಾರ್ಪೊರೇಷನ್ನಿಗೆ ಬಂದರೆ, ಅತ್ತೆ ಮನೆಗೆ ಅಳಿಯ ಬಂದ ಹಾಗೆ; ಸೊಸೆ ಬಂದ ಹಾಗಲ್ಲ. ಒಂದು ಕಡೆ ಅತ್ತೆ, ಇನ್ನೊಂದು ಕಡೆ ಮಗಳು. ಈ ಆಲ್ಡರ್‌ಮೆನ್ನುಗಳು ನಮ್ಮ ಕಾರ್ಪೊರೇಷನ್ನಿನಲ್ಲಿ ಎಷ್ಟು ಅನುಕೂಲವನ್ನು ಪಡೆದಿದ್ದಾರೆಂದರೆ ಹೇಳುವುದಕ್ಕಾಗುವುದಿಲ್ಲ. ಆಲ್ಡರ್‌ಮನ್ ಆಗಿ ಬಂದು, ಕಡೆಯಲ್ಲಿ ಮೇಯರ್ ಆಗುತ್ತಾರೆ. ಜನಗಳಿಂದ ಚುನಾಯಿತರಾಗಿ, ಅವರಿಗಾಗಿ, ಬೆಳಿಗ್ಗೆ ಹಗಲು ರಾತ್ರಿ ಕಷ್ಟಪಟ್ಟು ದುಡಿದ ಸದಸ್ಯರನ್ನು ಕೇಳುವವರೇ ಇಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಕಾಂಗ್ರೆಸ್ ಫಂಡಿಗೆ ದುಡ್ಡು ಕೊಡುವುದಿಲ್ಲವೇ ?

ಶ್ರೀ ಕೆ. ದೇವಯ್ಯ.—ಅಷ್ಟು ಮಾತ್ರವಲ್ಲ. ತಮ್ಮ ಪ್ರಭಾವವನ್ನು ಅಲ್ಲಿ ಮಾತ್ರ ಬೀರುವುದಲ್ಲದೆ, ಇತರ ಕಡೆಗಳಲ್ಲಿಯೂ ಬೀರಿ, ಒಳ್ಳೆಯ ಪರಿಸ್ಥಿತಿಯನ್ನು ಅವರ ಸ್ವಂತಕ್ಕೆ ಉಂಟುಮಾಡಿಕೊಳ್ಳುತ್ತಿದ್ದಾರೆ. ಈ ಆಲ್ಡರ್‌ಮೆನ್ನುಗಳು ಹೋಗುವುದೇ ಲೇಸು. ಈ ಪದ್ಧತಿಯಿಂದ ಕಾರ್ಪೊರೇಷನ್ನಿಗೆ ಯಾರು ಚುನಾವಣೆಯಾಗಿ ಬಂದಿದ್ದಾರೋ, ಅವರಿಗೂ ಇವರಿಗೂ ಮನಸ್ತಾಪ ಉಂಟಾಗಿ ಗ್ರೂಪ್ ಉಂಟಾಗಿದೆ. ಈ ಒಂದು ಕಹಿ ವಾತಾವರಣ, ಈ ಗ್ರೂಪ್ ಮನೋಭಾವ ಕಾರ್ಪೊರೇಷನ್ನಿನಿಂದ ಹೋಗುವುದಕ್ಕೆ ಈ ಅಮೆಂಡ್‌ಮೆಂಟು ಸಹಾಯಕವಾಗುತ್ತದೆ. ಕಾರ್ಪೊರೇಷನ್ನಿಗೆ ಚೇಂಬರ್ ಆಫ್ ಕಾಮರ್ಸಿನಿಂದ, ಬೆಂಗಳೂರು ಟ್ರೇಡ್ಸ್‌ನಿಂದ, ಮೆಂಬರುಗಳು ಬರುತ್ತಾರೆ. ಕೆಲವು ಸಂದರ್ಭಗಳಲ್ಲಿ ಕಾರ್ಪೊರೇಷನ್ನಿಗೆ ದುಡ್ಡು ಇರುವುದಿಲ್ಲ. ಯಾವುದಾದರೂ ಮಾಲಿನ ಮೇಲೆ ಅಕ್ಟ್ರಾಯಿ ಟ್ಯಾಕ್ಸು ಹಾಕಿ, ಇನ್‌ಕಂ ಜಾಸ್ತಿ ಮಾಡಿಕೊಳ್ಳೋಣವೆಂದರೆ, ಇವರುಗಳು ತಮ್ಮ ಕೈವಾಡ ತೋರಿಸುತ್ತಾರೆ. ಇದರಿಂದ, ಒಬ್ಬರಿಂದ ಒಬ್ಬರಿಗೆ ತಿಕ್ಕಾಟಕ್ಕೆ ಅವಕಾಶವಾಗುತ್ತದೆ. ಇಂಥ ಪ್ರತ್ಯೇಕತಾ ಮನೋಭಾವ ಕಾರ್ಪೊರೇಷನ್ ಆಡಳಿತದಲ್ಲಿ ನಡೆದುಕೊಂಡು ಹೋಗುತ್ತಿದೆ.

ಅಮೇಲೆ ಎಲೆಕ್ಷನ್ ವಿಚಾರದಲ್ಲಿ ಬೇಕಾದಷ್ಟು ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಇಟ್ಟಿದ್ದೀರ; ಅವೆಲ್ಲಾ Representation of the People's Act, 1951, ಅನುಸರಿಸಿರುತ್ತದೆಂದು ಹೇಳಿದ್ದೀರಿ. ಅದು ಬಹಳ ಸಮಂಜಸವಾದುದು. ಇದರಲ್ಲಿ ಪ್ರತಿಯೊಂದು ಅಂಶ ಕೂಡಬೇಕಾದ್ದೆ. ಒಂದು ಕಡೆ ಮಾತ್ರ ಮಾನ್ಯ ಮಂತ್ರಿಗಳಿಂದ ಸ್ವಲ್ಪ ವಿತರಣೆಬೇಕು. ಅದು ಯಾವುದರಲ್ಲಿ ಅಂದರೆ, new section, 66. Prohibition of simultaneous member step ಎಂಬುದರಲ್ಲಿ. ಅದರಲ್ಲಿ (3)ರಲ್ಲಿ, The said person shall be deemed to have been elected only for the seat so choser and the vacancy arising thereby. Shall be filled by fresh election ಎಂದು ಹೇಳಿದೆ. ಇದರಲ್ಲಿ ನನಗೆ ಸ್ವಲ್ಪ doubt ಬಂದಿದೆ. ಅದು ಲೀಗಲ್ ಹೌದೋ ಅಲ್ಲವೋ ನನಗೆ ಗೊತ್ತಿಲ್ಲ. Fresh elections ಮಾಡುವ ಬದಲಾಗಿ, ಖಾಲಿ ಬಿದ್ದ ಸೀಟಿಗೆ, ಆ ಎಲೆಕ್ಷನ್ನಿನಲ್ಲಿ next highest vote ಯಾವ ಕ್ಯಾಂಡಿಡೇಟಿಗೆ ಬಂದಿರುತ್ತದೆಯೋ, 'he may be deemed to have been elected' ಎಂದು ಹಾಕಬಹುದು.

ಶ್ರೀ ಕೆ. ಪುಟ್ಟಸ್ವಾಮಿ (ನಗರಾಡಳಿತ ಶಾಖೆಯ ಮಂತ್ರಿಗಳು).—ರಿಸಲ್ಟ್ ಡಿಕ್ಲೇರ್ ಆದ ಮೇಲೆ there is no vacancy.

ಶ್ರೀ ಕೆ. ದೇವಯ್ಯ.—ಇನ್ನೊಂದು ಬಹಳ ಮುಖ್ಯ ವಿಚಾರವಿದೆ. ಅದು 69F. corrupt practices. ಇದರಲ್ಲಿ ಸಬ್-ಕ್ಲಾಸ್ (7)ರಲ್ಲಿ, the holding of any meeting in which invocating liquors are served, ಮಾತ್ರ corrupt practice ಎಂಬುದಾಗಿ ಪರಿಗಣಿಸಿದೆ. ಈ ಅಮೆಂಡ್‌ಮೆಂಟ್ ವಿಷಯದಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ಬೆಂಗಳೂರು ಸಿಟಿಯೊಳಗೆ ಎಕ್ಸ್‌ಪ್ರೆಸ್ ಬೀರ್ ಷಾಪುಗಳು, ಟಾಡಿ ಷಾಪುಗಳು ಇರುವುದರಿಂದ ಬಡ ಕುಟುಂಬಗಳು ಹಾಳಾಗುತ್ತಿವೆ.

ಪೋಲೀಸ್ ಸ್ಟೇಷನ್‌ಗೆ ಹೋಗುವ ಪರಿಸ್ಥಿತಿಗೆ ತಂದಿದ್ದೀರಿ. ಬೆಂಗಳೂರು ಸಿಟಿಯಲ್ಲಿ ಲೇಬರ್ ಬಹಳ ಹೆಚ್ಚಾಗಿದೆ, ಅವರ ಕಷ್ಟ ಸುಖ ಏನು ಎಂಬುದನ್ನು ತಿಳಿದುಕೊಂಡಿದ್ದೀರಿ. ಈ ಇಂಟಾಕ್ಸಿಕೆ

ಟಿಂಗ್ ಲಿಕ್ಕರ್ ಎನ್ನುವುದನ್ನು ತೆಗೆದುಹಾಕಬೇಕು ಇಲ್ಲದೇ ಇದ್ದರೆ ಪಾನನಿರೋಧವನ್ನು ಪೂರ್ಣ ಯಾಗಿ ಜಾರಿಗೆ ತರಬೇಕು. ಆ ರೀತಿ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಈ ಕ್ಲಾಜ್ ಬೇಕಾಗಿಲ್ಲ ಎಂದು ಹೇಳಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರವರು ಈ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸುತ್ತೇನೆ; ಅಷ್ಟು ಮಾತ್ರವಲ್ಲ ನಮ್ಮ ಬೆಂಗಳೂರು ನಗರಕ್ಕೆ ಇನ್ನು ಮುಂದೆ ಚುನಾವಣೆ ನಡೆದು ಯಾವ ಭೇದ ಭಾವನೆಯೂ ಇಲ್ಲದೆ ಎಲೆಕ್ಟೆಡ್ ಮೆಂಬರ್ಸ್ ಕಾರ್ಪೊರೇಷನ್‌ನ ಆಡಳಿತವನ್ನು ಚೆನ್ನಾಗಿ ನಡೆಸಿಕೊಂಡು ಬರಲಿ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಬಾಳಿ ಬದುಕಿ ಜನತೆಯ ಸೇವೆಯನ್ನು ಮಾಡಲಿ ಎಂದು ಈ ಸಂದರ್ಭದಲ್ಲಿ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ಸಿಟಿ).—ಅಧ್ಯಕ್ಷರೇ, ಈ ಬೆಂಗಳೂರು ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ ಬಗ್ಗೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ ಮಾನ್ಯ ಮಂತ್ರಿಗಳು ಮೈಸೂರು ಸಿಟಿಯಲ್ಲಿ ಎರಡು ವರ್ಷ ಅಧ್ಯಕ್ಷಗಿರಿ ಮಾಡಿದ್ದಾರೆ. ಅವರು ಪ್ರಜಾಪ್ರಭುತ್ವದಲ್ಲಿ ಅಚಲವಾದ ಭಕ್ತಿ ಇದ್ದಂಥವರು, ಅಂಥವರು ತಂದ ಈ ಬಿಲ್ಲನ್ನು ನೋಡಿದ ಮೇಲೆ ನನಗಂತೂ ಬಹಳ ಆಶ್ಚರ್ಯವಾಯಿತು. ಒಂದನ್ನು ಮಾತ್ರ ಬಿಟ್ಟು ಬಾಕಿಯದು ಯಾವುದೂ ಕೂಡ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿರತಕ್ಕದ್ದು ಒಂದೇ ಒಂದು ಆಲ್ಡರ್‌ಮನ್‌ಅನ್ನು ತೆಗೆದುಹಾಕಿದ್ದಾರೆ ಅದನ್ನು ನಿಜವಾಗಿಯೂ ಕೂಡ ಸ್ವಾಗತ ಮಾಡ ಬೇಕಾದ್ದೇ. ಸರ್ಕಾರದವರು ನೇಮಕ ಮಾಡುತ್ತಾ ಇದ್ದ ಅಧಿಕಾರವನ್ನು ಬಿಟ್ಟುಕೊಟ್ಟಿದ್ದಾರೆ. ಮುನಿಸಿಪಾಲಿಟೀಸ್ ಬಿಲ್‌ನಲ್ಲಿ ಹೆಂಗಸರಿಗೆ ಸ್ಥಾನಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಕಾರ್ಪೊರೇಷನ್‌ನಲ್ಲಿ ಅದನ್ನು ಕೂಡ ಕಸಿದುಕೊಂಡಿದ್ದಾರೆ. ಏಕೆ ಈ ರೀತಿ ಮಾಡಿದ್ದಾರೆ ಎಂಬುದನ್ನೂ ಕೂಡ ಈ ಸಭೆಗೆ ಹೇಳಬೇಕು, ಅದು ಅಷ್ಟಾಗಿ ಒಳ್ಳೆಯದಲ್ಲ ಎಂದೂ ನಾನಾದರೂ ಭಾವಿಸುತ್ತೇನೆ.

ಸೆಕ್ಷನ್ 48ರಲ್ಲಿ 'ನಂಬರ್ ಆಫ್ ಕೌನ್ಸಿಲರ್ಸ್' ಅಂತ ಹೇಳಿ ಇದುವರೆಗೂ ಇದ್ದಂಥ ಪದ್ಧತಿಯನ್ನು ತೆಗೆದುಬಿಟ್ಟು ಹೊಸ ಪದ್ಧತಿಯನ್ನು ಇಲ್ಲಿ ಸೇರಿಸಿದ್ದಾರೆ. ಸರ್ಕಾರದವರೇ ಈ ಸಂಖ್ಯೆಯನ್ನು ಗೊತ್ತುಮಾಡತಕ್ಕ ಒಂದು ಅಧಿಕಾರವನ್ನು ತೆಗೆದುಕೊಂಡಿದ್ದಾರೆ. ಸಾಧಾರಣವಾಗಿ ಕಾರ್ಪೊರೇಷನ್‌ಗೇ ಈ ಅಧಿಕಾರವನ್ನು ಕೊಡಬೇಕಾಗಿತ್ತು ತಪ್ಪಿದರೆ ಜನಸಂಖ್ಯೆಯ ಮೇಲೆ ಇದನ್ನು ನಿಗದಿ ಮಾಡಿದ್ದರೆ ಚೆನ್ನಾಗಿತ್ತು ಎಂದು ನಾನು ಭಾವಿಸುತ್ತೇನೆ. ಈ ಅಧಿಕಾರವನ್ನು ತೆಗೆದಿರುವುದು ಅಷ್ಟು ಚೆನ್ನಾಗಿಲ್ಲ.

48ನೇ ಸೆಕ್ಷನ್ (ಸಿ)ನಲ್ಲಿ ಒಂದು ಅಥವಾ ಎರಡು ಎಂದು ನಿಯಮ ಮಾಡಿದ್ದಾರೆ. ಅದು ನಿಜವಾಗಿಯೂ ಕೂಡ ಕಾಂಗ್ರೆಸ್‌ನವರ ಸ್ಥಾನ ಉಳಿಸಿಕೊಳ್ಳುವುದಕ್ಕೆ ಮಾಡಿದ್ದಾರೆ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ಎಲ್ಲಿ ಅನುಕೂಲವಾಗುತ್ತದೆಯೋ ಅಲ್ಲಿ ಎರಡು ಮಾಡಿಕೊಳ್ಳಬಹುದು ಎಲ್ಲಿ ಅನಾನುಕೂಲವಾಗುತ್ತದೆಯೋ ಅಲ್ಲಿ ಒಂದು ಮಾಡಬಹುದು ಆ ಒಂದು ಅನುಕೂಲ ಒದಗಿಸಿಕೊಳ್ಳುವ ರೀತಿಯಲ್ಲಿ ಈ ಆಕ್ಟ್ ಇದೆ ಇದು ತಿದ್ದುಪಡಿಯಾಗಲೇ ಬೇಕು, ಇದುವರೆಗೂ ಯಾವ ಪದ್ಧತಿ ಇದೆ ಅದೇ ರೀತಿಯಲ್ಲಿ ಮಾಡಬೇಕು. ಕಾಲ ಬಂದಹಾಗೆ ಕೆಲವು ಬದಲಾವಣೆಗಳನ್ನು ಮಾಡುತ್ತಾರೆ, ಇನ್ನು ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ.

ಸೆಕ್ಷನ್ 69ರಲ್ಲಿ ಬಹುಶಃ 26 ಅಕ್ಷರಗಳನ್ನೂ ಉಪಯೋಗಿಸಿದ್ದಾರೆ (ಎ) ಯಿಂದ ಹಿಡಿದು (ಜಡ್)ವರೆಗೂ ಇನ್ನೂ ಏನಾದರೂ ಇದ್ದಿದ್ದರೆ ಅದನ್ನೂ ಉಪಯೋಗಿಸಿಕೊಳ್ಳುತ್ತಿದ್ದರೋ ಏನೋ ಅಕ್ಷರಗಳು ಮುಗಿದುಹೋಗಿವೆ ಅಂತ ಬಿಟ್ಟಿದ್ದಾರೆ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ಇದರಲ್ಲಿ ಒಂದು ವಿಷಯವನ್ನು ಬಹಳ ಚೆನ್ನಾಗಿ ಹೇಳಬಹುದು ಕರಪ್ಟ್ ಪ್ರಾಕ್ಟೀಸ್ ಅಂತ ಮಾಡಿದ್ದೀರಿ, ಬಹುಶಃ ಇದು ಪುಸ್ತಕದಲ್ಲಿ ಇರುತ್ತದೆ ಎಂದು ಭಾವಿಸುತ್ತೇನೆ, ನನ್ನ ಅನುಭವ ಎಂದರೆ ಮೊನ್ನೆ ಆದ ಪುರಸಭಾ ಚುನಾವಣೆಯಲ್ಲಿ ಮಾನ್ಯ ಮಂತ್ರಿಗಳೂ ಕೂಡ ರಾತ್ರಿ ಹನ್ನೆರಡು ಗಂಟೆ, ಒಂದು ಗಂಟೆಯವರೆಗೂ ಎಂದರೆ ಎಲೆಕ್ಷನ್ ನಡೆಯುವ ದಿವಸವೂ ಕೂಡ ಎಲೆಕ್ಷನ್‌ಗೆ ಕ್ಯಾನ್‌ವಾಸ್ ಮಾಡುತ್ತಾ ಇದ್ದರು. ಹೀಗಾದರೆ ಪ್ರಜಾಪ್ರಭುತ್ವದಲ್ಲಿ ಎಷ್ಟುಮಟ್ಟಿಗೆ ಜನ ನಂಬಿಕೆಯನ್ನು ಇಟ್ಟುಕೊಳ್ಳಬೇಕೋ ಅರ್ಥವಾಗುವುದಿಲ್ಲ. ಪುಸ್ತಕದಲ್ಲಿ ಇರುವುದಕ್ಕೆ ಬದಲಾಗಿ ಕಾರ್ಯತಃ ಸ್ವಲ್ಪವಾದರೂ ಮಾಡಿದರೆ ಬಹುಶಃ ಬಹಳ ಚೆನ್ನಾಗಿರುತ್ತದೆ ಎಂದು ನಾನಾದರೂ ಭಾವಿಸುತ್ತೇನೆ. ಮಾನ್ಯಮಂತ್ರಿಗಳು ಬಹಳ ಕಾಲದಿಂದಲೂ ಪೌರಸಭಾ ಸದಸ್ಯರಾಗಿದ್ದರು ಮತ್ತು ಈಗ ಮಂತ್ರಿಗಳೂ ಕೂಡ ಆಗಿದ್ದಾರೆ ಅವರು ಈ ಒಂದು ಕ್ಲಾಸ್‌ನ್ನು ಇನ್‌ಟ್ರಡ್ಯೂಸ್ ಮಾಡಿರತಕ್ಕದ್ದು, ಈ ಒಂದು ಕಠಿಣವಾದ ಶಿಕ್ಷೆಗಳನ್ನು ವಿಧಿಸುವ ಕ್ಲಾಜುಗಳನ್ನು ಸೇರಿಸಿರುವುದು ಪ್ರಜಾಪ್ರಭುತ್ವಕ್ಕೆ ಹೇಗೆ ಹೊಂದುತ್ತದೆ, ಇದು ಅವರ ಮನಸ್ಸಿನಲ್ಲಿ ಹೇಗೆ ಬಂತು ಎಂದು ಕೇಳುತ್ತೇನೆ?

ಶ್ರೀ ಕೆ. ಪುಟ್ಟಸ್ವಾಮಿ.—ಅಸೆಂಬ್ಲಿ ಎಲೆಕ್ಷನ್‌ಗೂ ಹೀಗೆಯೇ ಇದೆ.

ಶ್ರೀ ಬಿ. ಕೆ. ಪುಟ್ಟಯ್ಯ.—ಅದರಲ್ಲೇನೋ ಇರುತ್ತದೆ; ಆದರೆ ಮಾನ್ಯ ಮಂತ್ರಿಗಳು ಬಂದು ಮಾಡಿದ್ದೇನು ಎಂದು ಪ್ರಶ್ನೆ ಮಾಡುತ್ತೇನೆ.

Sri K. PUTTASWAMY.—I do not claim any originality. I have only copied the provisions of R. P. Act.

ಶ್ರೀ ಬಿ. ಕೆ. ಪುಟ್ಟಯ್ಯ.—ಇಂಗ್ಲೀಷಿನವರನ್ನು ಏಕೆ ಕಳುಹಿಸಿಕೊಟ್ಟು ನಿಮ್ಮನ್ನು ಕರೆಸಿ ಕೊಂಡೆವೋ ಗೊತ್ತಾಗುವುದಿಲ್ಲ.

ಸೆಕ್ಷನ್ 69 (ಕೆ)ನಲ್ಲಿ 'ಕನ್ವಿಕ್ಷನ್' ಎಂಬ ಪದವನ್ನು ಉಪಯೋಗಿಸಿದ್ದಾರೆ. ಇದು ಬಹಳ ಓಬೀರಾಯನ ಕಾಲದ ಮಾತು ಆಯಿತು. ಕಾಲಕ್ಕೆ ತಕ್ಕಹಾಗೆ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ, ಅದಕ್ಕೆ ಬೇಕಾದಷ್ಟು ಅವಕಾಶಗಳು ಇವೆ. ಕನ್ವಿಕ್ಷನ್ ಎನ್ನುವುದಕ್ಕೆ ಬದಲಾಗಿ ಬೇರೆ ಯಾವುದೂ ಇಲ್ಲವೇ ? 69 (ಎಂ) ಕ್ಲಾಜಿನಲ್ಲಿ 250 ರೂಪಾಯಿಗಳ ದಂಡ ವಿಧಿಸಲು ಅವಕಾಶ ಮಾಡಲಾಗಿದೆ. ಆದರೆ ಅದು ಈಗಿನ ಕಾಲಕ್ಕೆ ಹೊಂದಾಣಿಕೆಯಾಗುವುದಿಲ್ಲ, ಅದನ್ನು ಕಡಮೆ ಮಾಡಬೇಕು. ಮತ್ತು 69 (ಎನ್) ಕ್ಲಾಜಿನಲ್ಲಿ ಅರೆಸ್ಟ್ ಮಾಡುವುದಕ್ಕೆ, 3 ತಿಂಗಳವರೆಗೆ ಸಜಾ ಶಿಕ್ಷೆ ವಿಧಿಸುವುದಕ್ಕೆ ಅವಕಾಶವಿದೆ. 69 (ಆರ್) ಕ್ಲಾಜಿನಲ್ಲಿ 500 ರೂಪಾಯಿಗಳ ದಂಡ ವಿಧಿಸುವುದಕ್ಕೆ ಮತ್ತು ಇಂಪ್ರಿಸನ್‌ಮೆಂಟ್ ಇವೆರಡಕ್ಕೂ ಕೂಡ ಅವಕಾಶವಿದೆ. ಇದೆಲ್ಲಾ ನೋಡಿದರೆ ಮುನಿಸಿಪಲ್ ಕೌನ್ಸಿಲ್ ಸದಸ್ಯರಾಗಬೇಕೆ ಬೇಡವೆ ಎಂದು ಜನರು ಯೋಚನೆ ಮಾಡಬೇಕಾಗುತ್ತದೆ. ತಿದ್ದುಪಡಿ ಮಸೂದೆ ತಂದಿರುವುದು ಈಗಿನ ಕಾಲಕ್ಕನುಗುಣವಾಗಿಲ್ಲ. ದಯೆಯಿಟ್ಟು ಕಾಲಕ್ಕನುಸಾರವಾಗಿ ಸೂಕ್ತ ಮಾರ್ಪಾಡು ಮಾಡಿ ತರಬೇಕೆಂದು ನಾನು ಈ ಸಮಯದಲ್ಲಿ ಒತ್ತಿಹೇಳುತ್ತೇನೆ. ಇದನ್ನು ವಿಮರ್ಶೆ ಮಾಡುವುದು ಒಳ್ಳೆಯದು. ಉದ್ದೇಶ ಮತ್ತು ಕಾರಣಗಳ ವಿವರದಲ್ಲಿ ಕೊಟ್ಟಿರುವುದಕ್ಕೂ ಬಿಲ್ಲಿನಲ್ಲಿರುವುದಕ್ಕೂ ಅಷ್ಟಾಗಿ ಹೊಂದಾಣಿಕೆಯಾಗುವುದಿಲ್ಲ. ದಯೆಯಿಟ್ಟು ಮತ್ತೆ ಪರ್ಯಾಲೋಚನೆ ಮಾಡಿ ಸೂಕ್ತ ತಿದ್ದುಪಡಿಯೊಡನೆ ತರುವುದು ಸೂಕ್ತ, ಹಾಗೆ ಮಾಡಬೇಕು ಎಂದು ಮನವಿಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಈ ತಿದ್ದುಪಡಿ ಮಸೂದೆಯಲ್ಲಿರುವ ಕೆಲವು ಅಂಶಗಳನ್ನು ನಾವು ಒಪ್ಪುವುದಾದರೂ ಈ ಸರ್ಕಾರದ ಧೋರಣೆಯೇನಿದೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಕಾನೂನುಗಳನ್ನೆಲ್ಲಾ ಸಮನ್ವಯ ಮಾಡಿ ಒಂದು ಹೋಲ್‌ಸಂ ಮೆಷರ್ ತರಲು 7 ವರ್ಷವಾಯಿತು. ಮೊನ್ನೆ ಕಾರ್ಪೊರೇಷನ್ ಬಿಲ್ಲಿಗೆ ಮುಂಬಯಿ ಕರ್ಣಾಟಕಕ್ಕೆ ಸಂಬಂಧಪಟ್ಟ ಒಂದು ತಿದ್ದುಪಡಿ ತಂದರು. ಈಗ ರಿಸರ್ವೇಷನ್ ಬೇಡ, ಆಲ್ಡರ್‌ಮೆನ್ ಬೇಡ ಎಂದು ಹೇಳಿದ್ದಾರೆ, ಖಾಲಿ ಸ್ಟೈಟಿಗೆ ತೆರಿಗೆ ಹಾಕುತ್ತಿದ್ದಾರೆ. ಇದಿಷ್ಟನ್ನೂ ಬಿಟ್ಟು ಇಡೀ ರಾಜ್ಯಕ್ಕೆ ಅನ್ವಯವಾಗುವ ಒಂದು ಕಾನೂನನ್ನು ತರಲು ಏಕೆ ಪ್ರಯತ್ನ ಮಾಡಲಿಲ್ಲ ? 690 ಕಾನೂನುಗಳನ್ನೆಲ್ಲಾ ಸಮನ್ವಯ ಮಾಡಬೇಕೆಂದು 1957ರಿಂದಲೂ ಹೇಳುತ್ತಿದ್ದೀರಿ. ಮೊನ್ನೆ ವಿಲೇಜ್ ಡಿಫೆನ್ಸ್ ಬಿಲ್ಲು ತಂದರು ಹೊಸ ಬಿಲ್ಲುಗಳನ್ನು ತರುತ್ತಿದ್ದಾರೆ. ಮನಸ್ಸಿಗೆ ಬೇಕಾದ್ದನ್ನು ಬೇಗ ಮಾಡುತ್ತಾರೆ. ಧಾರವಾಡ ಕಾರ್ಪೊರೇಷನ್ ಏನಿದೆ ಅಲ್ಲಿ ಯಾವ ಅಧಿಕಾರಿಗೂ ಕೆಲಸಮಾಡಲು ಇಷ್ಟವಿಲ್ಲ. ಈಗ ಈ ಪೀಸ ಮೀಲ್ ಕಾನೂನೇಕೆ ? ಆಲ್ಡರ್‌ಮೆನ್ ಬೇಡವೆಂದು ಹೇಳುವುದರ ಉದ್ದೇಶವೇನು ? ಒಳ್ಳೆಯ ಉದ್ದೇಶವಿರುವಂತೆ ಕಾಣುತ್ತದೆ. ಆದರೆ ಕಾನೂನುಗಳ ಸಮನ್ವಯ ಮಾಡಲು ಇನ್ನೂ ಎಷ್ಟು ವರ್ಷ ಬೇಕು ? ಸಮನ್ವಯ ಮಾಡುವುದಕ್ಕಾಗದಿದ್ದರೆ ಈ ರಾಜ್ಯವನ್ನೇಕೆ ಎರಡು ಮಾಡಬಾರದು ಪ್ರತಿ ಕಾನೂನಿಗೂ ಬೇಕಾದಷ್ಟು ತಿದ್ದುಪಡಿಗಳು ಬರುತ್ತಿವೆ, ಟೆನೆನ್ಸಿ ಆಕ್ಟಿಗೆ, ಮುನಿಸಿಪಲ್ ಆಕ್ಟಿಗೆ ಹೀಗೆಲ್ಲಾ ತಿದ್ದುಪಡಿಗಳು ಬರುತ್ತಿವೆ. ಆಯಾ ರಾಜ್ಯದಲ್ಲಿರುವ ಕಾನೂನು ಅಲ್ಲಿ ಹಾಗೇ ಇರಲಿ ನಮ್ಮಲ್ಲಿ ಅವಶ್ಯಕವಾದ ರಕ್ಷಣೆ ಇದೆ. ಗಂಡಾಂತರ ಬೇಡ, ಎಲ್ಲಾ ಕಾನೂನುಗಳನ್ನೂ ಸಮನ್ವಯ ಮಾಡಲು ಕಷ್ಟವಾಗಿದ್ದರೆ ಈ ರಾಜ್ಯವನ್ನು ಮತ್ತೆ 2 ಭಾಗಮಾಡಿ ಆಯಾ ಪ್ರದೇಶಗಳಲ್ಲಿರುವ ಕಾನೂನುಗಳು ಅಲ್ಲಿಯೇ ಇರುವಂತೆ ಮಾಡಿ. ಕಾನೂನುಗಳ ಸಮನ್ವಯ ಮಾಡುತ್ತೇವೆಂದು ಹೇಳಿ 7 ವರ್ಷಗಳಾಗುತ್ತಾ ಬಂತು ಅದನ್ನು ಜಾಗ್ರತೆ ಮಾಡಬೇಕು ಎಂದು ಹೇಳಿ ಖಾಲಿ ಸ್ಟೈಟುಗಳ ಮೇಲೆ ತೆರಿಗೆ ಹಾಕಬೇಕೆಂದಿರುವುದು ಸಂತೋಷದ ವಿಚಾರವೆಂದು ತಿಳಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಸಿದ್ದಯ್ಯ ಕಾಶಿಮಠ್ (ಶಿರಹಟ್ಟಿ).—ಅಧ್ಯಕ್ಷರೇ, ಈ ವಿಧೇಯಕದಲ್ಲಿ ಬರುವ ಎಲೆಕ್‌ಷನ್ ಸಲುವಾಗಿ ಕೆಲವೊಂದು ವ್ಯಾಪಾರ್ಟು ಮಾಡಿದ್ದಾರೆ. 4ನೆಯ ಕ್ಲಾಜಿನಲ್ಲಿ ಎಷ್ಟು ಮಂದಿ ಸದಸ್ಯರಿರಬೇಕೆಂಬುದನ್ನು ಸೂಚಿಸಿದ್ದಾರೆ. ಆದರೆ ಗುಂಭವಾಗಿ ಏಕೆ ಹೇಳಿರುವುದು ? ಹಿಂದಿನ ಆಕ್ಟಿನಲ್ಲಿ ಸವಿಸ್ತಾರವಾಗಿ ಎಷ್ಟು ಸದಸ್ಯರಿರಬೇಕು, ಹೆಣ್ಣುಮಕ್ಕಳೆಷ್ಟಿರಬೇಕು ಎಂದು ಖಚಿತವಾಗಿರುವಾಗ ಇಲ್ಲಿ ಅದನ್ನು ಸರ್ಕಾರದವರು ನೋಟಿಫಿಕೇಷನ್ ಮೂಲಕ ತಿಳಿಸಬೇಕೆಂದು ಹೇಳುವುದು ಅರ್ಥವಾಗಿಲ್ಲ, ತಿಳಿಸಬೇಕು. ಹಿಂದಿನ ಆಕ್ಟಿನಲ್ಲಿ ವಿಶದವಾಗಿದೆ, ಹಾಗೆ ಇಲ್ಲೂ ತಿಳಿಸಿದ್ದರೆ ಚೆನ್ನಾಗಿತ್ತು. ಈಗ ಎಷ್ಟು ಡಿವಿಜನ್ನುಗಳನ್ನು ಮಾಡಲಾಗುವುದು, ಸೀಟ್ಸ್ ಎಷ್ಟು ಎಂದು ನಿಗದಿಯಾಗಿ ಹೇಳದಿರುವುದರಿಂದ ಅನುಮಾನ ಬಂದಿದೆ. ತಿದ್ದುಪಡಿ ನೋಡಿದರೆ ಏನೋ ಉದ್ದೇಶದಿಂದ ಮಾಡಿದ್ದಾರೆಂದು ಅಪವಾದಕ್ಕೆ ಗುರಿಯಾಗಬೇಕಾಗುತ್ತದೆ. ಅನಂತರ ರಾಜ್ಯಾಂಗದ ಪ್ರಕಾರ 333ನೆಯ ಆರ್ಟಿಕಲ್‌ನಂತೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಕೆಲವು ಸೌಲಭ್ಯಗಳನ್ನು ಮುಂದುವರೆಸಬೇಕು. ಕೆಲವು ಕಡೆ ರಿಸರ್ವ್ ಸೀಟಿಲ್ಲ, ಜನರಲ್ ಸೀಟು ಮಾತ್ರ ಇದೆ. ಹೆಂಗಸರಿಗೂ ಇದರಲ್ಲಿ ರೆಪ್ರಸೆಂಟೇಷನ್ನು ಇರಬೇಕೆಂದು ಮಾಡಿದರೆ ಸರಿಯಾಗಿರುತ್ತದೆ. ಇದರಲ್ಲಿರುವ ಸೆಕ್ಷನ್ನು 3ರ ರೊಳಗೆ

"(IA) Nothing contained in sub-section (1) shall be deemed to prevent the members of the Scheduled Castes for whom seats have been reserved in the Corporation from standing for election to the non-reserved seats in the Corporation."

ಈ ರೀತಿ ಏಕೆ ಇದರಲ್ಲಿ ಮಾಡಿದ್ದಾರೆನ್ನುವುದು ನನಗೆ ಗೊತ್ತಾಗುತ್ತಿಲ್ಲ, ಜನರಲ್ ಸೀಟುಗಳ ಜೊತೆಯಲ್ಲಿ ರಿಸರ್ವೇಷನ್ನೂ ಇರಬೇಕು.

ಮತ್ತೆ ತಾವು ಇಲ್ಲಿ ಎಷ್ಟು ಡಿವಿಜನ್ನುಗಳೆಂದು ಮಾಡುತ್ತೀರಿ ಎನ್ನುವುದು ವಿಶದವಾಗಿಲ್ಲ. ಇದರ ಬಗ್ಗೆ ತಾವು ಉತ್ತರ ಕೊಡುವಾಗ ಹೇಳಬೇಕೆಂದು ಕೋರುತ್ತೇನೆ.

ಕ್ಲಾಸು 12 ರಲ್ಲಿ 66 Prohibition of simultaneous membership : ಇದರಲ್ಲಿ ಮೂರು ದಿನಗಳು ಎಂದು ಇದ್ದರೆ ಸಾಲುವುದಿಲ್ಲ. ಇದನ್ನು ಏಳು ದಿವಸಗಳೆಂದು ಮಾಡಿದರೆ ಸರಿಯಾಗಿರುತ್ತದೆ ಎಂದು ನನಗೆ ತೋರುತ್ತದೆ. ಅಲ್ಲದೆ ಇದೇ ಸೆಕ್ಷನ್ನಿನ (ತಿ) ರಲ್ಲಿ ಹೀಗಿದೆ :

(1) If a person is elected for more than one seat, he shall, within three days from the date of the last of such elections by notice in writing signed by him and delivered to the Commissioner intimate the seat from which he chooses to serve, and the choice shall be final.''

ಇದು ಪೀಪಲ್ಸ್ ರೆಪ್ರಸೆಂಟೇಷನು ಆಕ್ಟಿನಲ್ಲಿಲ್ಲ ಇದನ್ನೇಕೆ ಇದರಲ್ಲಿ ಮಾಡಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ವಿವರಗಳನ್ನು ತಿಳಿಯಬಯಸುತ್ತೇನೆ.

ಕರಪ್ಟ್ ಪ್ರಾಕ್ಟೀಸಸ್ ಬಗ್ಗೆ ಇದರಲ್ಲಿ ಹೇಳುತ್ತ 69 (ಎಚ್) ನಲ್ಲಿ ಚುನಾವಣೆ ನಡೆಯುವುದಕ್ಕೆ 24 ಗಂಟೆಗಳ ಮುಂದೆ ಕ್ಯಾನ್‌ವಾಸು ಮಾಡಿದರೆ ಅಂತಹವರಿಗೆ ಶಿಕ್ಷೆ ಮತ್ತು 250 ರೂಪಾಯಿಗಳಷ್ಟು ಜುಲ್ಮಾನೆ ವಿಧಿಸಬೇಕೆಂದು ಇದೆ. ಇದು ಸರಿಯಾಗಿಲ್ಲ ಎಂದು ನನಗನಿಸುತ್ತದೆ. ಇದರ ಬಗ್ಗೆ ಸ್ವಲ್ಪ ಉದಾರವಾಗಿರಬೇಕೆಂದು ರೂಲ್ಸುಗಳನ್ನು ಮಾಡುವಾಗ ಇದರಲ್ಲಿ ಸೇರಿಸಬೇಕೆಂದು ಸಲಹೆ ಮಾಡುತ್ತೇನೆ. ಇದರಲ್ಲಿ ನಿರ್ದಿಷ್ಟವಾದ ವಿವರಗಳನ್ನು ಇದರಲ್ಲಿ ಸೇರಿಸಬೇಕು, ಅದನ್ನು ನಿಯಮಗಳಲ್ಲಿ ಮಾಡಬೇಕು.

69 (ಜೆ) ಯೊಳಗೆ (4) ರಲ್ಲಿ ಹೀಗಿದೆ :

(4) Any person who contravenes any of the provisions of sub-section (1) or sub-section (2) shall, on conviction be punished with imprisonment for a term which may extend to six months, or with fine which may extend to two thousand rupees, or with both.

(ಶ್ರೀ ಸಿದ್ಧಯ್ಯ ಕಾಶೀಮಠ್)

ಇದು ಬಹಳ ಹೆಚ್ಚು ಆಯಿತು. ಇದನ್ನು ಆದಷ್ಟೂ ಕಡಿಮೆ ಮಾಡಬೇಕು. ಅಲ್ಲದೆ ಇದರಲ್ಲಿ ಈ ಸೆಕ್ಷನ್ನು ಇರುವುದು ಸರಿಯಲ್ಲ. ಆದರಿಂದ ಇದನ್ನು ಇಲ್ಲಿಂದ ಡಿಲೀಟ್ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ರಿಮೂವಲ್ ಆಫ್ ಡಿಸ್‌ಕ್ವಾಲಿಫಿಕೇಷನ್ನು ಬಗ್ಗೆ ಇದರಲ್ಲಿ ಹೇಳಲಾಗಿದೆ. ಇದನ್ನು ನೋಡಿದರೆ ಸರಕಾರದವರು ಪವರನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳುವುದರಿಂದ ಇದು ಈಗ ಇರುವ ಇಂಡಿಯನ್ ಪೀನಲ್ ಕೋಡಿಗೆ ವ್ಯತಿರಿಕ್ತವಾಗಿ ಹೋಗುತ್ತದೋ ಎನ್ನುವ ಅನುಮಾನ ಬರುತ್ತದೆ. ಇದನ್ನು ಸರಿಯಾಗಿ ಪರಿಶೀಲನೆ ಮಾಡುವುದು ಯೋಗ್ಯಕರವಾಗಿ ಕಾಣುತ್ತದೆ.

ಇದರ ಬಗ್ಗೆ ನಾನು ಹೇಳುವುದು ಇಷ್ಟು. ಪೀಪಿಲ್ಸ್ ರೆಪ್ರಸೆಂಟೇಷನ್ ಆಕ್ಟು ಪ್ರಕಾರ ಇದನ್ನು ತಂದಿರುವುದೇನೋ ಸರಿ. ಆದರೆ ಇದನ್ನು ಸರಿಯಾಗಿ ಕಾರ್ಯಗತ ಮಾಡಲು ಅನುಕೂಲವಾಗುವಂತೆ ತಕ್ಕ ನಿಯಮಗಳನ್ನು ಮಾಡಿ ಚುನಾವಣೆಗಳು ಸರಿಯಾದ ರೀತಿಯಲ್ಲಿ ನಡೆಯುವಂತೆ ಮಾಡುವುದು ಉತ್ತಮ. ಈ ಕಾನೂನು ಆದಷ್ಟು ಜಾಗ್ರತೆ ಜಾರಿಗೆ ಬರುವಂತೆ ಬೇಗನೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ

† **Sri G. V. GOWDA.**—By way of amendments, a number of new ideas are sought to be incorporated in the Corporation Act. The other day, I submitted to the House that in the interest of the smooth running of the Corporation, it is desirable to have an uniform act for all Corporations. But piecemeal amendments are continued to be brought before us. The Hon'ble Minister for Local Self-Government stated that several sections of the Peoples Representation Act are sought to be incorporated in this Act. I fail to understand whether we would be justified in this. By copying the Peoples' Representation Act word-to-word, could this Assembly be said to have passed an act by itself. We are substituting our enactment with an enactment passed by Parliament. There is not an iota of originaility in the amendments. Hitherto for election petitions, cetrtain procedure had been perscribed. Where is the need for any other sort of election to panchayats, taluk boards, or corporations? That should be followed in the same manner as the election to the Assembly, Council or Parliament. I do not know how we are justified in copying the provisions of an Act of Parliament. It is very hard to say that even in an election to panchayat he has to follow a certain procedure prescribed for election to Parliament. This is making people rush to lawyers because ordinarly they cannot file any election petition without the assistance of Advocates. Why should you make people who are interested in serving local bodies also follow a procedure adumbrated by Parliament? Tihs is not an election to Assembly or Parliament. What is the principle in saying that even for election to local bodies the procedure followed in the case of Parliament should be followed? Can we say that we have made an enactment by copying the provisions of a Central Act?

Then with a view to reserve seats for Scheduled Castes one of the sections is sought to be amended. I went through the Act and I find that there are 6 seats for Scheduled Castes. It is incumbent on us to make provisions as per the Constitution to reserve seats for Scheduled Castes and I welcome this amendment.

Then coming to the new section 48 regarding determination of number of Councillors, divisions, *etc.*, here it is entirely left to the discretion of Government to fix the number of seats. This should have been fixed by the statute itself and not left to Government to determine by notification. Tomorrow they may say 300 members are to be elected. Is it desirable and in the interest of smooth running of the Corporation ? This provision does not fit in with democratic principles and so I submit that the statute itself should fix the maximum and minimum. Then it is also not certain whether it would be single member or double member constituency. So I strongly oppose this provision in the new section 48 which is unwarranted and which is likely to be abused and which is not in the interests of the successful functioning of the Corporation.

So far as the clause seeking to change the mode of assessment of lands and buildings is concerned, the amendment seeks to bring in a procedure not contemplated anywhere in any of the enactments governing taxation. I am gled that land has been brought under the purview of tax, but the mode of assessment is strange. Generally, a municipality or corporation levies tax on the annual letting value of the property, building or land and it is a portion of that value. But here the market value of the land is sought to be taken into consideration for the purpose of levying this tax. This is not fair and I submit that only the annual income of the building or land should be the criterion for levying the tax. The market value may be anything. The tax is sought to be levied at 0.04 per cent of the market value of the land and it is also provided that it shall not be less than Rs. 10 per annum. Suppose the market value of a land is Rs. 1000. According to this clause, the tax will come to Rs. 4 but according to the proviso, a minimum tax of Rs. 10 has to be paid. This, I think, is not based on any principle and it is arbitrary and untenable and does not stand to reason. This clause is likely to be misused. I leave it to Government to reconsider this matter and stress that the method of imposing tax should be in conformity with the procedure and methods adopted in other corporations in other States.

4-30 P.M.

Let them examine the acts of other States, the procedure they follow and the methods they adopt in levying these taxes. So far as rural areas are concerned, it is said, exemption may be given, or even a rate lesser than the rate that is levied in other areas may be imposed, I wish to submit supposing the rural area which was under the jurisdiction of a panchyat is included within the limits of the corporation in a particular month. Immediately after the area gets included in the Corporation, there is no justification whatsoever to levy a rate of tax in the manner it is being levied in other areas of the corporation because nothing has been done so far as those areas are concerned to provide water facilities, lighting facilities and so on. It is not known whether

(SRI G. V. GOWDA)

all the facilities which have been given to other areas and to which this area is entitled are given to them when it is included in the Corporation limits. First they should extend all the benefits enjoyed by other areas to this area also and until those facilities are extended, no tax shall be levied. Why don't you say specifically that after the Corporation authorities are satisfied that all facilities are extended, they should impose tax on that area. So, we have to make a specific provision that until those facilities are extended to those areas, they should not be liable to tax. Sir, it is said that provision for reservation for women, trade and commerce and election of aldermen are proposed to be deleted. But they retain one provision namely that the Government may appoint a person or persons having special knowledge or experience of any subject relating to the municipal administration to be a special councillor or councillors for such subjects. What was the difficulty in even deleting this item? They have deleted reservation for women representatives, for trade and other things. If we say that the Government is justified in doing so, what about this element of nomination which is still there? Under the guise of nominating somebody, they may say that they are experienced men so far as municipal administration is concerned and then appoint five members. Where is it said that one member should be nominated or five should be nominated. It is still vague. So, the Government is not justified in saying that they have removed the element of nomination because they still keep this kind of nomination relating to persons having knowledge or experience of municipal administration. With regard to tax on buildings, it is sought to be raised from 10 to 20 per cent. It is likely that it is more than what was prevailing hitherto. After giving effect to this Act, the rates that will be levied on buildings by way of tax would be more. I think under the guise of smoothening elections to the corporation, all sorts of amendments are sought to be introduced. I do not know how we will be justified in including those amendments on an occasion like this. It seeks to take away certain advantages and at the same time seeks to impose higher rates of tax. I therefore submit that this kind of introduction of amendments on no ground would justify the House to give its consideration and consent.

†ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು-ದಕ್ಷಿಣ).—ಅಧ್ಯಕ್ಷರೇ, ಈಗ ಬೆಂಗಳೂರು ಕಾರ್ಪೋರೇಷನ್ ತಿದ್ದುಪಡಿ ಮಸೂದೆಯ ಮೇಲೆ ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿರುತ್ತಾರೆ. ಆದರೆ ನನ್ನ ಅಭಿಪ್ರಾಯವನ್ನು ಕೆಲವು ಮಾತುಗಳಲ್ಲಿ ಹೇಳಲು ಇಷ್ಟಪಡುತ್ತೇನೆ. ಈಗ ಕಾರ್ಪೋರೇಷನ್ನಿನಲ್ಲಿ ಬಿಲ್ಡಿಂಗ್ ಟ್ಯಾಕ್ಸ್ ಇರುವುದೇ ಜಾಸ್ತಿಯಾಗಿದೆ. ಅದರಮೇಲೆ ಇನ್ನೂ ಸ್ವಲ್ಪ ಈಗ ಜಾಸ್ತಿ ಮಾಡುವ ಹಾಗೆ ನಮ್ಮ ಸರ್ಕಾರದವರು ಈಗ ತಂದಿರುವ ಈ ಮಸೂದೆಯಿಂದ ಕಾಣುತ್ತದೆ. ಇದು ಬಹಳ ಜಾಸ್ತಿಯೆಂದು ನನ್ನ ಅಭಿಪ್ರಾಯ.

ಸ್ವಾಮಿ, ಇನ್ನೊಂದು ವಿಷಯ. ಮತ್ತೆ ಕಾರ್ಪೋರೇಷನ್ನಿಗೆ ನಮ್ಮ ತಾಲ್ಲೂಕಿನ ಕೆಲವು ಗ್ರಾಮಗಳನ್ನು ಸೇರಿಸಿದ್ದಾರೆ. ಅವರು ಯಾವುದೇ ಸೇರಿಸಲಿ, ಅಲ್ಲಲ್ಲಿ ಡಿವಿಷನ್ನುಗಳನ್ನು ಮಾಡುವಾಗ ಈಗ ಹಾಲಿ ಇರತಕ್ಕ ಕೆಲವು ಸದಸ್ಯರುಗಳ ಮನಸ್ಸು ಪ್ರಕಾರ ಇಲ್ಲಿರುವ ಗ್ರಾಮ ತೆಗೆದು ಅಲ್ಲಿ ಹಾಕುವುದು, ಅಲ್ಲಿರುವ ಗ್ರಾಮ ತೆಗೆದು ಇಲ್ಲಿ ಹಾಕುವುದು—ಹೀಗೆ ಅನಾನುಕೂಲಗಳನ್ನು ಮಾಡುತ್ತಿದ್ದಾರೆ. ಹಳ್ಳಿಯವರನ್ನು ಕಂಡರೆ ಇವರು ಇಷ್ಟು ಅನಾದರಣೆಯಿಂದ ಕಾಣುತ್ತಿದ್ದಾರೆ

ಯಾವಾಗಲೂ ಪಕ್ಕದಲ್ಲಿರುವ ಗ್ರಾಮವನ್ನು ಸೇರಿಸಿ ಒಂದು ಡಿವಿಷನ್ ಮಾಡಿದರೆ ಅಲ್ಲಿನ ಸದಸ್ಯರುಗಳು ಬಂದು ಅಲ್ಲಿನ ಜನರ ಕಷ್ಟಗಳನ್ನು ನೋಡಲು ಅನುಕೂಲವಾಗುತ್ತದೆ. ಅಲ್ಲದೆ ಕಾರ್ಪೊರೇಷನ್ನಿನಲ್ಲಿ ಎಷ್ಟೋ ಹಣವನ್ನು ತೆರಿಗೆಗಳ ಮೂಲಕ ವಸೂಲುಮಾಡುತ್ತಿದ್ದಾರೆ. ಆದರೆ ವಸೂಲು ಮಾಡಿದಂತಹ ಹಣವನ್ನು ನ್ಯಾಯವಾಗಿ ಖರ್ಚುಮಾಡಿದರೆ ಜನಗಳಿಗೆ ಬಹಳ ಅನುಕೂಲವಾಗುತ್ತದೆ. ಮಾನ್ಯ ಉಪಮಂತ್ರಿಗಳೇ ನೋಡಿರಬಹುದು. ಕಾರ್ಪೊರೇಷನ್ನಿನ ಹಣದಲ್ಲಿ ಒಂದು ಸಾರಿ ಒಂದು ಕಲ್ಲು ಹಾಕುವುದು, ಪುನಃ ಅದನ್ನು ಕಿತ್ತು ಹಾಕುವುದು, ಜಲ್ಲಿ ಒಂದು ಸಾರಿ ಹಾಕುವುದು, ಕೀಳುವುದು ಇನ್ನೊಂದು ಸಾರಿ ಸಿಮೆಂಟು ಹಾಕುವುದು—ಈ ರೀತಿ ಮಾಡಿದರೆ ಜನಗಳ ದುಡ್ಡು ಅನ್ಯಾಯವಾಗುವುದಿಲ್ಲವೇ ? ಈ ರೀತಿ ಇನ್ನುಮುಂದೆ ಮಾಡದಹಾಗೆ ಕಾರ್ಪೊರೇಷನ್ನಿಗೆ ಕೂಡಲೇ ಸೂಕ್ತ ತಿಳುವಳಿಕೆ ಕೊಡಬೇಕೆಂದು ನಾನು ವಿನಯದಿಂದ ಈ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ಜಮೀನುಗಳನ್ನು ಕೊಂಡುಕೊಳ್ಳುವ ವ್ಯವಸಾಯಗಾರರಿಗೆ ಆ ಜಮೀನುಗಳನ್ನು ಸೂಕ್ತ ಬೆಲೆಗೆ ಕೊಡಬೇಕು. ಅದನ್ನು ಮಾನ್ಯ ಸರ್ಕಾರದವರು ವಿಚಾರಮಾಡಿ ಜಾಗ್ರತೆಯಾಗಿ ತಕ್ಕ ಕಾರ್ಯಕ್ರಮವನ್ನು ಆ ಬಗ್ಗೆ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು, ನನಗೆ ಇಲ್ಲಿ ಮಾತನಾಡಲು ಈಗ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ ಈ ಶಾಸನಸಭೆ ಪ್ರಾರಂಭವಾದಮೇಲೆ ಸರ್ಕಾರದವರು ಕೆಲವು ಅಮೆಂಡ್‌ಮೆಂಟ್ ಬಿಲ್ಲುಗಳನ್ನು ತಂದರು. ನಾವು ಸುಮ್ಮನೆ ಸಭೆಯ ಕಾಲವನ್ನು ದುರ್ವ್ಯಯ ಮಾಡಬಾರದು. ಈಗ ಜನಗಳಿಗೆ ಏನು ತೊಂದರೆಗಳು ಇವೆಯೋ ಅವುಗಳನ್ನೆಲ್ಲಾ ಪರಿಹರಿಸುವಂತಹ ಮಸೂದೆಗಳನ್ನು ತರಬೇಕು. ಮೈಸೂರು ಸರ್ಕಾರದವರು ಯಾವಾಗಲೂ ಆಂಧ್ರ, ಕೇರಳ ಮತ್ತು ಮದ್ರಾಸು ಈ ರಾಜ್ಯಗಳವರು ಮಾಡಿದಂತಹ ಕಾನೂನುಗಳನ್ನು ಕಾಪಿ ಮಾಡುತ್ತಾರೆಯೇ ವಿನಾ ತಾವೇ ಸ್ವತಃ ಯಾವ ಒಂದು ಕಾನೂನನ್ನು ಮಾಡುವುದಿಲ್ಲ. ಇದರಿಂದಲೇ ನಮ್ಮ ಸರ್ಕಾರದವರಿಗೆ ಎಷ್ಟು ಬುದ್ಧಿ ಇದೆ ಎಂಬುದು ಗೊತ್ತಾಗುತ್ತದೆ. ಈಗ ಈ ಸಭೆಯಮುಂದೆ ಬೆಂಗಳೂರು ಮುನಿಸಿಪಲ್ ಅಮೆಂಡ್‌ಮೆಂಟ್ ಬಿಲ್ಲನ್ನು ತಂದಿದ್ದಾರೆ. ನಾನು ತಿಳಿದುಕೊಂಡಿದ್ದೆ, ಈ ಮಸೂದೆಯಲ್ಲಿ ಈಗ ಆಗತಕ್ಕಂಥ ಅನ್ಯಾಯ ಅತ್ಯಾಚಾರಗಳನ್ನೆಲ್ಲಾ ಹೋಗಲಾಡಿಸಿ ಸಿಟಿಯಲ್ಲಿ ವಾಸಮಾಡತಕ್ಕ ಜನಗಳಿಗೆಲ್ಲರಿಗೂ ಮತ್ತು ಬೆಂಗಳೂರಿಗೆ ಬಂದು ಹೋಗತಕ್ಕ ಜನಗಳೆಲ್ಲರಿಗೂ ಸೌಕರ್ಯವನ್ನು ಕಲ್ಪಿಸಿಕೊಡತಕ್ಕ ಒಂದು ಉತ್ತಮವಾದ ಅಮೆಂಡ್‌ಮೆಂಟ್ ಬಿಲ್ಲನ್ನು ಈ ಸಭೆಯ ಮುಂದೆ ತಂದಿದ್ದಾರೆ ಎಂದು ನಾನು ಯೋಚನೆ ಮಾಡಿದ್ದೆ. ಆದರೆ ಈಗ ಇದು ತಂದಿರುವ ಬಿಲ್ಲೇ ಬೇರೆ ರೀತಿಯದಾಗಿದೆ. ಈ ಮಸೂದೆಯನ್ನು ಮಂಡಿಸಿರತಕ್ಕ ಮಾನ್ಯ ಪೌರಾಡಳಿತ ಶಾಖೆಯ ಉಪಮಂತ್ರಿಗಳಾದ ವೈ. ರಾಮಚಂದ್ರ ಅವರಿಗೆ ಇಂಡಿಪೆಂಡೆಂಟಾಗಿ ಯಾವ ಒಂದು ಪೋರ್ಟ್‌ಫೋಲಿಯೋವನ್ನೂ ಕೊಡದೆ ಸಾಯಿಸುತ್ತಿದ್ದಾರೆ. ಪಾಪ ಅವರು ಬಾಯಿಬಿಟ್ಟು ಕೇಳುವ ಹಾಗಿಲ್ಲ. ಇಂಥಾ ಸಂದರ್ಭದಲ್ಲಿ ಅವರು ಮನಸ್ಸಿನಲ್ಲಿ ನಾವು ಮಂತ್ರಿಮಂಡಲದಲ್ಲಿ ಇದ್ದೇವೆ, ದೇಶವನ್ನು ಆಳುತ್ತಿದ್ದೇವೆ ಎಂದು ಗಂಭೀರವಾಗಿ, ವೈಖರಿಯಿಂದ ತಿರುಗಾಡುತ್ತಿದ್ದಾರೆ. ಪಾಪ ಅವರು ಕೆಲವುಕಾಲ ಸುಖವನ್ನು ಅನುಭವಿಸಲಿ. ಅವರೂ ನಮ್ಮ ದೇಶದ ಜನರೇ, ಅವರೇನು ಬೇರೆ ಅಲ್ಲ. ಇಲ್ಲಿಗೆ ಶಾಸನಸಭಾ ಸದಸ್ಯರಾಗಿ ಬರುವುದಕ್ಕೆ ಎಷ್ಟು ಹಣವನ್ನು ಖರ್ಚುಮಾಡಿ ಹೇಗೆ ಇಲ್ಲಿಗೆ ಬಂದು ಕುಳಿತುಕೊಂಡಿದ್ದಾರೆಂಬುದು ಎಲ್ಲರಿಗೂ ಗೊತ್ತು. ಎಲೆಕ್ಷನ್ ನಡೆಯುವ ಕಾಲದಲ್ಲಿ ಜನಗಳಿಂದ ವೋಟು ಪಡೆಯುವುದಕ್ಕೆ ಸೇಂದಿ, ಶರಾಬು, ಬೀರ್‌ಬಾಟಲ್ ಇವುಗಳಿಗೋಸ್ಕರ ಎಷ್ಟೋ ಹಣ ಖರ್ಚಾಗಿದೆ. ಯಾರು ಲಾ ಮಾಡುತ್ತಾರೆಯೋ ಯಾರು ವೇದವನ್ನು ಹೇಳುತ್ತಾರೆಯೋ ಅವರೇ ಕಾನೂನು ಮುರಿಯುವುದಕ್ಕೆ ಪ್ರಾರಂಭ ಮಾಡಿದರೆ ಇವರು ಯಾವ ರೀತಿ ರಾಜ್ಯಭಾರ ಮಾಡುತ್ತಾರೋ ನನಗಂತೂ ಅರ್ಥವಾಗುವುದಿಲ್ಲ.

ಇನ್ನೊಂದು ವಿಷಯವನ್ನ ಹೇಳುತ್ತೇನೆ. ಅದೇನೆಂದರೆ ಈಗ ಎಷ್ಟೋ ಜನ ಕಾರ್ಪೊರೇಟರುಗಳು ಏನು ಮಾಡುತ್ತಾರೆಂದರೆ ಯಾವುದೋ ಒಂದು ರೋಡು ರಿಪೇರಿ ಮಾಡಿಸಬೇಕು, ಟಾರ್ ಹಾಕಿಸಬೇಕು ಎಂದು ಹೇಳಿ ಯಾರಿಗೋ ತಮಗೆ ಬೇಕಾದವರ ಹೆಸರಿಗೆ ಕಂಟ್ರಾಕ್ಟ್ ಕೊಡಿಸುವುದು ಅದಕ್ಕೆ 10 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ 50 ಸಾವಿರ ರೂಪಾಯಿ ಸಂಪಾದನೆ ಮಾಡಿಕೊಳ್ಳುತ್ತಾರೆ. ಕೆಲವರಿಗೆ ಇದೇ ಒಂದು ವ್ಯಾಪಾರವಾಗಿಬಿಟ್ಟಿದೆ. ಈಗ ಯಾವುದಾದರೂ ಒಂದು ವ್ಯಾಪಾರ ಮಾಡಬೇಕಾಗಿದ್ದರೆ ಟ್ಯಾಕ್ಸ್ ಕೊಟ್ಟು, ಸುಂಕ ಕೊಟ್ಟು ಬಾಡಿಗೆ ಕೊಟ್ಟು, ಇನ್ನು ಇತರೆ ಆಳುಗಳಿಗೆ ಸಂಬಳ ಕೊಟ್ಟು ಹೆಚ್ಚು ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ತಮಗೆ ಬೇಕಾದ 10 ಜನ ಕಂಟ್ರಾಕ್ಟರುಗಳನ್ನು ಇಟ್ಟುಕೊಂಡು ಅವರ ಹೆಸರಿಗೆ ಕಂಟ್ರಾಕ್ಟ್ ಕೊಡಿಸಿ ಕಾರ್ಪೊರೇಟರುಗಳು ಇಂಡೈರೆಕ್ಟಾಗಿ ಕಂಟ್ರಾಕ್ಟ್ ಮಾಡಬಹುದು. ಸಿಮೆಂಟ್ ರೋಡ್ ಮಾಡಿಸುತ್ತೇವೆ, ಟಾರ್ ರೋಡ್ ಮಾಡಿಸುತ್ತೇವೆ ಎಂದು ಕೆಲಸಗಳನ್ನು ಮಂಜೂರುಮಾಡಿಸಿಕೊಂಡು ತಮ್ಮ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಕಂಟ್ರಾಕ್ಟರುಗಳಿಗೆ ಕೆಲಸವನ್ನು ಕೊಡಿಸಿ ಅದರ ಮೂಲಕ ತಾವೂ ಸಹ ಸಂಪಾದನೆ ಮಾಡಿಕೊಳ್ಳ ಬಹುದು ಎನ್ನುವ ಒಂದು ಉದ್ದೇಶದಿಂದ ಈ ಮಸೂದೆಯನ್ನು ತಂದಂತೆ ಕಾಣುತ್ತದೆ. ಈಗ ಎಷ್ಟೋ ಜನ ಕಾರ್ಪೊರೇಟರು ಮತ್ತು ಮೇಯರುಗಳಾಗಿದ್ದವರು ಬೇಕಾದಷ್ಟು ಸೈಟು ಆಸ್ತಿಪಾಸ್ತಿ ಗಳನ್ನು ಮಾಡಿಕೊಂಡಿದ್ದಾರೆ. ಅದೆಲ್ಲವೂ ಅವರಿಗೆ ಎಲ್ಲಿಂದ ಬಂತು, ಹೀಗೆ ಎನ್ನತಕ್ಕಂಥ ಒಂದು ತನಿಖೆಯನ್ನು ನಡೆಸತಕ್ಕಂತ ಒಂದು ಪದ್ಧತಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆಯೇ ? ನಿಜ ವಾಗಿ ಯಾವ ಮನುಷ್ಯ ಕಾರ್ಪೊರೇಷನ್ನಿಗೆ ಟ್ಯಾಕ್ಸ್ ಕಟ್ಟುತ್ತಾನೆಯೋ ಅವನಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿದ್ದೀರಾ, ಸೌಕರ್ಯವನ್ನು ಒದಗಿಸಿದ್ದೀರಾ ಎಂದು ನಾನು ಕೇಳುತ್ತೇನೆ ಯಾರೋ ಸೆಕ್ರೆಟರಿಗಳು, ಗುಮಾಸ್ತರು ತಯಾರು ಮಾಡಿದತಕ್ಕ ಈ ಬಿಲ್ಲನ್ನು ನಮ್ಮ ಮಾನ್ಯ ಮಂತ್ರಿ ಗಳು ಈ ಸಭೆಯಲ್ಲಿ ತಂದಿದ್ದಾರೆ. ಬೃಹದಾಕಾರವಾಗಿ ಬೆಳೆಯುತಕ್ಕಂಥ ಈ ಬೆಂಗಳೂರು ನಗರದ ಅಭಿವೃದ್ಧಿಯ ವಿಷಯದಲ್ಲಿ ಒಂದು ಯೋಜನೆಯನ್ನು ಇಟ್ಟುಕೊಂಡು ಈ ಒಂದು ಮಸೂದೆಯನ್ನು ತಯಾರು ಮಾಡಿದ್ದರೆ ಚೆನ್ನಾಗಿತ್ತು ಎಂದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಹೇಳುವಂತಹ ವಿಷಯಗಳು ಎಲ್ಲಿ ಬರುತ್ತದೆ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಸೂದೆಯ ಒಳಗಡೆ ಸ್ವಲ್ಪ ಡೀಪಾಗಿ ಓದಿದರೆ ಅವೆಲ್ಲವೂ ಗೊತ್ತಾಗುತ್ತವೆ (ನಗು). ನಿಜವಾಗಿಯೂ ಈ ಬೆಂಗಳೂರು ನಗರದಲ್ಲಿ ಸೈಟುಗಳನ್ನು ಹಂಚತಕ್ಕ ವಿಷಯದಲ್ಲಿ ಅನೇಕ ಅನ್ಯಾಯಗಳು ನಡೆಯುತ್ತದೆ.

ಉಪಾಧ್ಯಕ್ಷರು.—ಅದನ್ನು ತಪ್ಪಿಸುವುದು ಹೇಗೆ ಎಂಬುದನ್ನು ತಿಳಿಸಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇವೊತ್ತಿನ ದಿವಸ ಯಾರೋ ಒಬ್ಬರು ತಮಗೆ ಬೇಕಾದ ಕಾರ್ಪೊರೇಟರಿಗೆ ಯಾವುದೋ ಒಂದು ಎಕ್ಸ್‌ಟೆನ್‌ಷನ್ ನಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಲೈಸೆನ್ಸ್ ಕೊಡುತ್ತಾರೆ. ಆಮೇಲೆ ಅದನ್ನು ಕಾರ್ಪೊರೇಷನ್ನಿಗೆ ಸೇರಿಸಿಕೊಳ್ಳುತ್ತಾರೆ. ಅದರಲ್ಲಿ ಮನೆಗಳನ್ನು ತಮಗೆ ಬೇಕಾದವರಿಗೆ ಅಲಾಟ್ ಮಾಡಿಸಿಕೊಳ್ಳು ತ್ತಾರೆ. ಈ ರೀತಿ ಏನೇನೋ ಅನ್ಯಾಯಗಳು ನಡೆಯುತ್ತವೆ. ಇವುಗಳನ್ನೆಲ್ಲಾ ಹೋಗಲಾಡಿಸ ಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ ಮಾನ್ಯ ನಗರಾಡಳಿತ ಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವ ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ (ಅಮೆಂಡೆಡ್) ವಿಧೇಯಕದಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದಕ್ಕೆ ನಾನು ಬಯಸುತ್ತೇನೆ. ಮುಖ್ಯವಾಗಿ ಇದುವರೆಗೆ ಬೆಂಗಳೂರಿನಲ್ಲಿ ಡಿವಿಜನ್‌ಗಳನ್ನು ಮಾಡಿ ಅದರ ಪ್ರಕಾರ ಕೌನ್ಸಿಲರ್ ಗಳನ್ನು ಚುನಾಯಿಸಬೇಕೆಂದು ಇತ್ತು. ಈಗ ಈ ಸಭೆಯ ಮುಂದೆ ತಂದಿರುವ ಮಸೂದೆಯ 48ನೇ ವಿಧಿಯಲ್ಲಿ ಡಿವಿಜನ್‌ಗಳನ್ನು ಯಾವ ಆಧಾರದ ಮೇಲೆ ರಚನೆ ಮಾಡಬೇಕು ; ಎಷ್ಟು ಜನ ಕೌನ್ಸಿಲರುಗಳನ್ನು ಆರಿಸಬೇಕು ಎನ್ನುವ ವಿಷಯಗಳ ಬಗ್ಗೆ ಏನೊಂದು ಆಧಾರವನ್ನೂ ಈ ಮಸೂದೆ ಯಲ್ಲಿ ಗೊತ್ತು ಮಾಡಿಲ್ಲ.

ಈಗ ಬೆಂಗಳೂರಿನ ಜನಸಂಖ್ಯೆ ಬೆಳೆಯುತ್ತಿದೆ. ಈಗಾಗಲೇ 13·14 ಲಕ್ಷಕ್ಕೆ ಹೋಗಿದೆಯೋ ಏನೋ. ಹೀಗಿರುವಾಗ ಐದು ಸಾವಿರ ಜನ ಸಂಖ್ಯೆಗೆ ಒಂದು ಅಥವಾ ಹತ್ತು ಸಾವಿರಕ್ಕೊಂದು ಎಂದು ಏನಾದರೂ ನಿಗದಿ ಮಾಡಿದರೆ ಅನುಕೂಲವಾಗುತ್ತಿತ್ತು. ಏಕೆಂದರೆ ಇಂಡಿಯಾ ದೇಶದ ಕ್ಷೇತ್ರಗಳನ್ನು ಕೂಡ ಪಾರ್ಲಿಮೆಂಟಿಗೆ ಮತ್ತು ಅಸೆಂಬ್ಲಿಗೆ ಇಷ್ಟು ಇರಬೇಕು ಎಂದು ಕನಿಷ್ಠ ಮತ್ತು ಕನಿಷ್ಟ ಪ್ರಜಾ ಸಂಖ್ಯೆ ಇಷ್ಟು ಎಂದು ಅವರು ತೀರ್ಮಾನ ಮಾಡಿದ್ದಾರೆ; ಮತ್ತು ಕ್ಷೇತ್ರಗಳನ್ನು ರಚನೆ ಮಾಡುವಾಗ ಯಾವ ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಚನೆ ಮಾಡಬೇಕು ಎಂದು ಅವರು ಆಧಾರವನ್ನು ನಮೂದು ಮಾಡಿದ್ದಾರೆ. ಸರ್ಕಾರದವರು ಈ ವಿಷಯದಲ್ಲಿ ಬಹಳ ಮಗುಂ ಆಗಿ ಇರುವುದನ್ನು ನೋಡಿ ನನಗೆ ಸ್ವಲ್ಪ ಭಯ ಉಂಟಾಗಿದೆ ಈಗ ಭದ್ರಾವತಿ ಪುರಸಭೆಯ ಚುನಾವಣೆಗಳಲ್ಲಿ ಈಗಾಗಲೇ ಫಲಿತಾಂಶ ಗೊತ್ತಾಗಿರುವ ಹಾಗೆ ಮುಂದೆ ಬರುವ ವರ್ಷ ನಗರದಲ್ಲಿ ಚುನಾವಣೆಗಳಾದರೂ ಕಾಂಗ್ರೆಸ್ ಪಕ್ಷ ಬರುವುದು ಬಹಳ ಅಸಂಭವವಿದೆ. ಏನ ದರೂ ಮಾಡಿ ಕಾಂಗ್ರೆಸ್ಸನ್ನು ಗೆಲಸುವ ದೃಷ್ಟಿಯಿಂದ ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಈ ಕ್ಷೇತ್ರಗಳನ್ನು ವಿಂಗಡಿಸುತ್ತಾರೆ ಎಂದು ಕಾಣುತ್ತದೆ. ಶ್ರೀಮಾನ್ ವೈ. ರಾಮಚಂದ್ರ ಅವರು ಇಲ್ಲಿಯೇ ಹುಟ್ಟಿ ಬೆಳೆದವರು. ಬೆಂಗಳೂರಿನ ಎಲ್ಲ ಪ್ರದೇಶಗಳನ್ನೂ ಚೆನ್ನಾಗಿ ಅರ್ಥ ಮಾಡಿ ಕೊಂಡಿದ್ದಾರೆ. ಈಗ 25 ವರ್ಷಗಳಿಂದ ಚುನಾವಣೆಗಳು ಹೇಗೆ ನಡೆದವು, ಯಾರು ಯಾರಿಗೆ ಓಟು ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ ಎನ್ನುವುದು ತಿಳಿದು ಈ ಅನುಭವದ ಮೇಲೆ ಇವರೆಲ್ಲ ಒಂದು ಕಡೆ ಕುಳಿತುಕೊಂಡು ಈ ರೀತಿ ಡಿವಿಜನ್ನುಗಳನ್ನು ಮಾಡು

ತ್ತಾರೆಯೋ ಏನೋ ಎನ್ನುವ ಅನುಮಾನ ಇದೆ. ಕೇವಲ ಇದು ಊಹೆಯ ಮೇಲೆ ಹೇಳುವ ಮಾತಲ್ಲ. ಈಗಾಗಲೇ ಅಂಥ ಕ್ಷೇತ್ರವನ್ನು ಪ್ರಿಮಿನರಿಯಾಗಿ ಮಾಡುವುದಕ್ಕೆ ಹೊರಟಿದ್ದಾರೆ. ಅಲ್ಲಿಂದ ಕೆಲವರು ಬಂದು ನನ್ನ ಹತ್ತಿರ ಹೇಳಿದ್ದಾರೆ. ಇವರು ಈ ರೀತಿ ತಮಗೆ ಅನುಕೂಲವಾದ ರೀತಿಯಲ್ಲಿ ನಗರವನ್ನು ಒಡೆದು ಡಿವಿಜನ್ನುಗಳನ್ನು ಮಾಡುತ್ತಿದ್ದಾರೆ ಎಂದು; ಹೀಗಾಗಬಾರದು. ಕ್ಷೇತ್ರವನ್ನು ರಚನೆ ಮಾಡುವುದಕ್ಕೆ ಪೂರ್ವ ಭಾವಿಯಾಗಿಯೇ ಇಂಥವರನ್ನು ಚುನಾವಣೆಗೆ ನಿಲ್ಲಿಸುತ್ತೇವೆ, ಇಂಥ ಜಾತಿಯವರು, ಇಂಥ ಪಕ್ಷದವರು ಇವರಿಗೆ ಓಟು ಕೊಡುತ್ತಾರೆ ಎಂದು ಯೋಚಿಸಿ ಇದನ್ನು ಮಾಡುವುದಾದರೆ ಅದರಿಂದ ತಮ್ಮ ಉದ್ದೇಶವೇನೋ ಸಾರ್ಥಕವಾಗುವುದಿಲ್ಲ. ಆ ರೀತಿಯ ಕಟ್ಟು ಕಟ್ಟಲೆಗಳನ್ನು ಹಾಕುವುದರಿಂದ, ಆ ರೀತಿ ವಿಭಜಿಸುವುದರಿಂದ ಕಾಂಗ್ರೆಸ್ಸನ್ನು ಗೆಲ್ಲಿಸಬೇಕು ಎಂದು ಹೇಳುವುದಾದರೆ ಆ ಉದ್ದೇಶ ಅಷ್ಟು ಸಾರ್ಥಕವಾಗುವುದಿಲ್ಲ. ಏನು ಕಾರಣವಾಗಿ ಈಗ ಇರತಕ್ಕ ಡಿವಿಜನ್‌ಗಳನ್ನು ಕೃತಕವಾಗಿ ನಿರ್ಮಿಸಿದರೆ ಅಲ್ಲಿರತಕ್ಕ ಓಟುದಾರರನ್ನು ವಿಶೇಷವಾದ ಅನಾನುಕೂಲಗಳಿಗೆ ಗುರಿಪಡಿಸುತ್ತೀರಿ ಎಂದು ಹೇಳಬೇಕಾಗಿದೆ.

ಒಂದು ಕ್ಷೇತ್ರಕ್ಕೆ ಒಬ್ಬರನ್ನು ಚುನಾವಣೆ ಮಾಡಬೇಕೆಂದು ತೀರ್ಮಾನ ಮಾಡುವುದು ಒಳ್ಳೆಯದು. ಏಕೆಂದರೆ ಸಣ್ಣ ಊರುಗಳಲ್ಲಿ ಕೆಲವು ಸಲ 14 ಓಟು ಇದ್ದವನು ಗೆಲ್ಲುವ ಸ್ಥಿತಿ ಇತ್ತು. ಒಂದು ಮನೆಯಲ್ಲಿ 10-20 ಜನರಿದ್ದರೆ ಅವನು ಆರಿಸಿ ಬರುವಂಥ ಸನ್ನಿವೇಶವಿತ್ತು. ಅದಕ್ಕಾಗಿ ಡಿವಿಜನ್‌ಗಳನ್ನು ಸ್ವಲ್ಪ ದೊಡ್ಡದು ಮಾಡಿ ಒಂದೊಂದು ಡಿವಿಜನ್ನಿನಿಂದ ಮೂರಕ್ಕೆ ಕಡಮೆ ಇಲ್ಲದೆ ಐದಕ್ಕೆ ಹೆಚ್ಚಿಲ್ಲದೆ ಸದಸ್ಯರು ಇರಬೇಕು ಎಂದು ಏನೋ ಮಾಡಿದರು. ಆದರೆ ಬೆಂಗಳೂರಿಗೆ ಬಹು ಸದಸ್ಯ ಕ್ಷೇತ್ರಗಳ ಅಗತ್ಯವಿಲ್ಲ. ಪ್ರತಿಯೊಂದು ಕಡೆಯೂ ಒಬ್ಬ ಸದಸ್ಯರನ್ನು ಆರಿಸುವುದು ಎಂದು ನಿಯಮ ಹಾಕಿಕೊಳ್ಳುವುದು ಒಳ್ಳೆಯದು.

ಆಲ್ಡರಮನ್ ಎಂದು ಏನು ಓಬೀರಾಯನ ಕಾಲದ ನಾಮಕರಣ ಪದ್ಧತಿಯಲ್ಲಿ ಬಂದಿತ್ತೋ ಅದನ್ನು ಇಷ್ಟು ಕಾಲದ ನಂತರ ಎಂದರೆ ದೇಶಕ್ಕೆ ಸ್ವಾತಂತ್ರ್ಯ ಬಂದು 16 ವರ್ಷಗಳಾದ ನಂತರ ನಮ್ಮ ಸರ್ಕಾರದವರು ಆಲ್ಡರ್‌ಮನ್‌ಗಳ ನೇಮಕವನ್ನು ಕೈಬಿಡುವುದು ಒಂದು ರೀತಿಯಲ್ಲಿ ಸ್ವಾಗತಾರ್ಹವಾದ ವಿಷಯ. ಎಂಥೆಂಥವರು ನಾಮಕರಣವಾಗಿ ಬರುತ್ತಿದ್ದರು, ಅವರು ಎಷ್ಟು ಅನಾಹುತಗಳನ್ನು ಮಾಡಿದ್ದಾರೆ. ಅವರು ಹೇಗೆ ಕಾರ್ಪೊರೇಷನ್ ಅಧಿಕಾರವನ್ನು ಮತ್ತು ಆಸ್ತಿಯನ್ನು ಬಳಸಿಕೊಂಡರು ಎನ್ನುವುದು ಇತಿಹಾಸದಲ್ಲಿ ಸೇರಿದೆ. ಸರ್ಕಾರದವರು ನಾಮಕರಣ ಪದ್ಧತಿಯನ್ನು ಕೈಬಿಡುವ ಧೈರ್ಯವನ್ನು ಮಾಡಿರುವುದು ಬಹುಶಃ ಈ ಮಂತ್ರಿ ಮಂಡಲದವರ ಮತ್ತು ಸರ್ಕಾರದ ಸಾಹಸದ ಹೆಜ್ಜೆ ಎಂದು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಮಹಿಳೆಯರಿಗೆ ಸ್ಥಾನವನ್ನು ಕಾದಿಡಬೇಕೆ ಎನ್ನುವ ಪ್ರಶ್ನೆ. ಬಾಕಿ ಪುರಸಭೆಗಳಲ್ಲಿ ಆ ರೀತಿ ಕೊಡುತ್ತಿದ್ದಾರೆಂದು ಹೇಳಿದರು. ಬೇರೆ ಕಡೆಗಳಲ್ಲಿ ಕೊಡುತ್ತ ಇಲ್ಲ ಏಕೆ ಕೈ ಬಿಟ್ಟಿದ್ದಾರೆ ಎನ್ನುವುದು ಒಂದು ಪ್ರಶ್ನೆ. ಸೆಕ್ಸ್ ಆಧಾರದ ಮೇಲೆ ಡಿಸ್ಕ್ರಿಮಿನೇಷನ್ ಇರಬಾರದು ಎಂದು ಸಂವಿಧಾನ ಹೇಳುತ್ತದೆ, ನಿಜ. ಆದರೂ ಕೆಲವೊಂದು ಕ್ಷೇತ್ರಗಳಲ್ಲಿ ಅವರಿಗೆ ವಿಶೇಷ ಪ್ರಾತಿನಿಧ್ಯವನ್ನು ಕೊಟ್ಟುಕೊಂಡೇ ಬರುತ್ತಿದ್ದೇವೆ. ಬೆಂಗಳೂರಿನಂಥ ನಗರದಲ್ಲಿ ಎಷ್ಟೋ ಜನರು ಗಂಡಸರನ್ನು ಸೋಲಿಸಿ ಚುನಾವಣೆಯಲ್ಲಿ ಗೆಲ್ಲತಕ್ಕ ಮಹಿಳೆಯರಿದ್ದಾರೆ ಎಂದು ನನಗೆ ಗೊತ್ತಿದೆ. ಆದರೂ ಕೆಲವು ಕಾಲ ಅವರಿಗೆ ಸ್ಥಾನವನ್ನು ಕಾದಿಡುವ ಪದ್ಧತಿಯನ್ನು ಮುಂದುವರಿಸಬಹುದಾಗಿತ್ತೋ ಏನೋ ಎಂದು ನನಗನ್ನಿಸುತ್ತದೆ. ಅದನು ಪರಿಶೀಲನೆ ಮಾಡಬೇಕು. ಈಗಿರುವಂತೆ ಕೆಲವು ಕ್ಷೇತ್ರಗಳಲ್ಲಿ ಮಹಿಳೆಯರನ್ನು ನಿಲ್ಲಿಸಿ ಕಾರ್ಪೊರೇಷನ್ನಿಗೆ ಮತ್ತು ಪುರಸಭೆಗಳಿಗೆ ಅವರು ಹೆಚ್ಚಾಗಿ ಆರಿಸಿಬರುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ.

ಚುನಾವಣೆಗಳು ನಡೆಯುವ ಕ್ರಮದಲ್ಲಿ ಕರಪ್ಟ್ ಪ್ರಾಕ್ಟಿಸಸ್ ಎಂದರೆ ಏನು ಎನ್ನುವುದಕ್ಕೆ ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್‌ನಲ್ಲಿ ಏನಿದೆಯೋ ಅದನ್ನೇ ಇಲ್ಲಿಯೂ ಹಾಕಿದ್ದೇವೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದರು. ಸಾಮಾನ್ಯವಾಗಿ ಹೇಳಬೇಕು ಎಂದರೆ ನಮ್ಮಲ್ಲಿ ಕೋರ್ಟಿಗೆ ಹೋಗಿ ಇತ್ಯರ್ಥವಾಗಿರತಕ್ಕ ಅನೇಕ ಚುನಾವಣಾ ಅರ್ಜಿಗಳ ಪೈಕಿ ಕರಪ್ಟ್ ಪ್ರಾಕ್ಟೀಸ್ ಎನ್ನುವುದನ್ನು ಸಾಬೀತು ಮಾಡುವುದಕ್ಕೇ ಆಗಿಲ್ಲ. ಅದು ಕಾನೂನು ಪುಸ್ತಕದಲ್ಲಿ ಮಾತ್ರ ಉಳಿದಿದೆ. ಆರು ಸಾವಿರ ರೂಪಾಯಿಗಿಂತ ಹೆಚ್ಚು ಖರ್ಚು ಮಾಡಬಾರದೆಂದು ಇದ್ದರೂ 60 ಸಾವಿರ, ಒಂದು ಲಕ್ಷ ರೂಪಾಯಿಗಳವರೆಗೂ ಚುನಾವಣೆಗಳಲ್ಲಿ ಖರ್ಚು ಮಾಡಿ ಗೆದ್ದು ಬಂದಿರತಕ್ಕ ಎಷ್ಟೋ ಜನರನ್ನು ನಾವು ನೋಡಿದ್ದೇವೆ. ಈ ತಿದ್ದುಪಡಿ ವಿಧೇಯಕದಲ್ಲಿ ಕೆಲವು ಉಗ್ರವಾದ ಶಿಕ್ಷೆಗಳನ್ನು ನಮೂದು ಮಾಡಿದ್ದಾರೆ. ಇದನ್ನು ನಿರ್ವಹಿಸತಕ್ಕ ಮತ್ತು ಪರಿಶುದ್ಧವಾಗಿ ಚುನಾವಣೆಗಳನ್ನು ನಡೆಸತಕ್ಕ ಜವಾಬ್ದಾರಿ ಈ ಕಾನೂನನ್ನು ಜಾರಿಗೆ ತರುವವರ ಮೇಲೆ ಇರುತ್ತದೆ. ಇಲ್ಲದೆ

(ಶ್ರೀ ಎಸ್. ಗೋಪಾಲ ಗೌಡ)

ಇದ್ದರೆ ಈ ಕಾನೂನು ಒಂದು ಕಡೆಗೆ ಇರುತ್ತದೆ. ಹೇಗಿದ್ದರೂ ಬೆಂಗಳೂರಿನಲ್ಲಿ ಕುಡಿಯುವುದಕ್ಕೆ ತಾವು ಸಾಕಷ್ಟು ಮದ್ಯವನ್ನು ತಯಾರಿಸುತ್ತೀರಿ ಮತ್ತು ಹಂಚುತ್ತೀರಿ ಅಂಥವೆಲ್ಲ ತಕ್ಸೀರುಗಳು ಎಂದು ಇಟ್ಟುಕೊಂಡರೆ ಅದನ್ನೆಲ್ಲ ತಡೆಗಟ್ಟುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಅನೇಕ ತರಹ ಕರಪ್ಟ್ ಪ್ರಾಕ್ಟಿಸಸ್ ಇಲ್ಲವೇ. ಬ್ಯಾಲಟ್ ಪೇಪರನ್ನು ಹೊರಗಡೆ ತೆಗೆದುಕೊಂಡು ಹೋಗಿ, ಸಂಜೆ ಹೊತ್ತು ಬಂತು ಎಂದರೆ ಒಂದೊಂದು ಚೀಟಿಗೆ ಒಂದು ರೂಪಾಯಿ, ಎರಡು ರೂಪಾಯಿ, ನಾಲ್ಕು ರೂಪಾಯಿ, ಐದು ರೂಪಾಯಿ ಕೊಟ್ಟು ತೆಗೆದುಕೊಂಡಿರುವ ಪ್ರಸಂಗಗಳೂ ಇವೆ.

ಒಳಗೆ ಹೋಗಿ ಚೀಟಿಯನ್ನು ತೆಗೆದುಕೊಂಡು ಬಂದು ಹೊರಕ್ಕೆ ಕೊಡುವುದು, ಅವನ್ನು ಎಲ್ಲವನ್ನೂ ಒಳಗೆ ತೆಗೆದುಕೊಂಡು ಹೋಗಿ ಪೆಟ್ಟಿಗೆಯೊಳಕ್ಕೆ ಹಾಕುವುದು, ಇಂತಹ ಸಂದರ್ಭಗಳಿವೆ. ಇದನ್ನು ತಡೆಗಟ್ಟುವುದು ಬರಿಯ ಕಾನೂನನ್ನು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುವುದರಿಂದಲೇ ಸಾಧ್ಯವಿಲ್ಲ, ಇಂತಹ ಪರಿಸ್ಥಿತಿ ಇದರಿಂದಲೇ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆಂದು ನಂಬುವುದಿಲ್ಲ. ಆಡಳಿತ ಪಕ್ಷದವರೇ ಹೆಚ್ಚು ಭ್ರಷ್ಟಾಚಾರಗಳಿಗೆ ಮೂಲ. ಏನಾದರೂ ಮಾಡಿ ಬೆಂಗಳೂರು ನಗರದ ಕಾರ್ಪೊರೇಷನ್ನಿನ ಸ್ಥಾನಗಳನ್ನು ಬೇರೆಯವರಿಗೆ ಬಿಟ್ಟು ಕೊಡಬಾರದೆಂಬ ಉದ್ದೇಶದಿಂದ ಅನೇಕ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಒಂದು ವೇಳೆ ಬೇರೆ ಜನರು ಬಂದರೂ ಕೂಡ ಅವರಿಗೆ "ಕಾಂಗ್ರೆಸ್ ಮಾಡಿ" ಕಾಂಗ್ರೆಸ್‌ನವರೇ ಮೇಯರು ಮತ್ತು ಉಪ-ಮೇಯರಾಗುವಂತೆ ಮಾಡುತ್ತಾರೆ. ಈ ಕಾನೂನು ಆಧಾರದ ಮೇಲೆ ವ್ಯವಹಾರ ನಡೆದುಕೊಂಡು ಹೋಗುತ್ತದೆ ಎನ್ನುವುದಾದರೆ ನಾವು ಸುಮ್ಮನಿರಬಹುದು. ಆದರೆ ತಾನು ಹೇಳುವುದೇನೆಂದರೆ, ಯಾವುದೇ ಕಾನೂನು ಮಾಡಿದರೂ ಅದರಿಂದ ನುಸುಳಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಬೇರೆಯವರಿಗೆ ತೊಂದರೆ ಕೊಡುವುದಕ್ಕೆ ನೋಡುತ್ತಾರೆ. ಈ ಕಾನೂನನ್ನು ಜಾರಿ ಮಾಡುವಾಗ ಇದನ್ನು ಜಾರಿ ಮಾಡುವ ಅಧಿಕಾರಿಗಳಿಗೆ ಕಷ್ಟ ಬರುತ್ತದೆ. ಯಾವುದನ್ನು ಜಾರಿ ಮಾಡಬೇಕು ಯಾವುದು ಬೇಡ ಎನ್ನುವುದು ಅವರಿಗೆ ತಿಳಿಯುವುದು ಕಷ್ಟ. ಇದನ್ನು ಕಾರ್ಯಗತ ಮಾಡುವುದಿಲ್ಲವೆಂದು ವಿಷಾದವಾಗುತ್ತದೆ. ಜಾರಿ ಮಾಡಬೇಕೆಂದು ಕಾನೂನನ್ನೇನೋ ಮಾಡಿದ್ದಾರೆ. ತಾರತಮ್ಯವಿಲ್ಲದಂತೆ ಎಲ್ಲರೂ ಇದನ್ನು ಅನುಸರಿಸುವಂತೆ ಮಾಡಿದರೆ ಬಹಳ ದೊಡ್ಡ ಸಾಧನೆ ಮಾಡಿದಂತಾಗುತ್ತದೆ.

5-00 P.M.

ಸ್ವಾಮಿ, ರಿಜರ್ವೇಷನ್ ವಿಷಯದಲ್ಲಿ ಒಂದು ಮಾತನ್ನು ಹೇಳುವುದು ಮರೆತಿದ್ದೆ. ಇದುವರೆಗೂ ಲೇಬರ್‌ಗೆ ಪ್ರಾತಿನಿಧ್ಯವಿತ್ತು, ಟೆಕ್ಸ್‌ಟೈಲ್ ಮತ್ತು ನಾನ್‌ಟೆಕ್ಸ್‌ಟೈಲ್‌ಗೆ ಒಂದೊಂದರಂತೆ ಎರಡು ಸ್ಥಾನಗಳನ್ನು ಇಟ್ಟಿದ್ದರು. ಈ ಬಗ್ಗೆ ಶ್ರೀ ದೇವಯ್ಯನವರು ಈ ರೀತಿ ಇರುವವರು ಮತ್ತು ಇಲ್ಲದೇ ಇರುವವರು ಎಲ್ಲರೂ ಬೇಜಾರು ಪಟ್ಟರೆ ಅದು ಸಲ್ಲದೆಂದು ಅಧ್ಯಾತ್ಮಿಕಕ್ಕೆ ಸಂಬಂಧಪಟ್ಟ ಒಂದು ಸಿದ್ಧಾಂತವನ್ನು ಹೇಳಿದರು. ಅವರದು ಭಕ್ತಿಮಾರ್ಗ. ಅದು ನನಗೆ ಅಷ್ಟು ಹಿಡಿಸಲಿಲ್ಲ. ಕೂಲಿಗಾರರಿದ್ದಾರೆ, ಮಾಲೀಕರಿದ್ದಾರೆ. ಕೂಲಿಗಾರರು ಶೋಷಿತವರ್ಗವೆಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಶೋಷಿತ ವರ್ಗಕ್ಕೆ ವಿಶೇಷ ಪ್ರಾತಿನಿಧ್ಯ ಬೆಂಗಳೂರು ನಗರದಂತಹ ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿರುವಂತಹ ನಗರಕ್ಕೆ ಅವಶ್ಯಕವೆಂದು ಆ ಕಾನೂನು ಮಾಡುವಾಗ ನಾವು ಒಪ್ಪಿದ್ದೆವು. ಆದರೆ ಈಗ ಈ ವರ್ಗವನ್ನು ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಕ್ಷೇತ್ರವನ್ನು ಪ್ರದೇಶದ ಆಧಾರದ ಮೇಲೆ ವಿಂಗಡಿಸುವಾಗ ಕೂಲಿಗಾರರು ಹೆಚ್ಚು ಸಂಖ್ಯೆಯಲ್ಲಿ ವಾಸಮಾಡುವ ಪ್ರದೇಶದಲ್ಲಿ ಕೂಲಿಗಾರರ ಪ್ರತಿನಿಧಿ ಚುನಾವಣೆಗೆ ಬಂದರೆ ಅವರ ಹಿತರಕ್ಷಣೆ ಮಾಡುವುದಕ್ಕೆ ಅವಕಾಶವಿದೆ. ಆದರೆ ವಿಶೇಷವಾಗಿ ಕೂಲಿಗಾರರ ರಕ್ಷಣೆ ಮಾಡಬೇಕಾದರೆ ಕೂಲಿಗಾರರಿಂದಲೇ ಪ್ರತಿನಿಧಿ ಬಂದರೆ ಅವರ ರಕ್ಷಣೆ ಸರಿಯಾಗಿ ಆಗುತ್ತದೆ ಎನ್ನುವುದು ಆದರ್ಶ. ಈಗ ಕೂಲಿಗಾರರಿಗೆ ಪ್ರತ್ಯೇಕ ಕಾಲೋನಿ ಕಟ್ಟಿಸಿಕೊಟ್ಟಿದ್ದಾರೆ ಎನ್ನೋಣ. ಇನ್ನೂ ಅನೇಕ ಅವರ ಅವಶ್ಯಕತೆಗಳಿರುತ್ತವೆ. ವಿದ್ಯಾಭ್ಯಾಸಕ್ಕೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಬೇಕಾಗುತ್ತದೆ. ಅವರ ಪ್ರತಿನಿಧಿಯಿದ್ದರೆ ಇದನ್ನು ಸಾಧಿಸಲು ಅನುಕೂಲವಾಗುತ್ತದೆ. ಶ್ರೀಮಂತರೂ ವರಿಷ್ಠರೂ ಇರುವ ಪ್ಯಾಲೇಸ್ ಆರ್ಚರ್ಡ್, ಕುಮಾರ ಪಾರ್ಕ್ ಮುಂತಾದ ಕಡೆ ಮೊದಲೇ ಯೋಚನೆ ಮಾಡಿ ದೊಡ್ಡ ದೊಡ್ಡ ನೀರಿನ ಪೈಪುಗಳನ್ನು ಹಾಕಿ ಅಲ್ಲಿಗೆ ಹಗಲೂ ರಾತ್ರಿ ನೀರು ಬರುವಂತೆ ಮಾಡಿ ಕೊಂಡಿದ್ದಾರೆ. ಆದರೆ ಸಾವಿರಾರು ಜನ ಕಾರ್ಮಿಕರಿರುವ ಕಡೆ ಸಣ್ಣ ಸಣ್ಣ ಪೈಪುಗಳನ್ನು ಹಾಕಿ ಅಲ್ಲಿ ನೀರು ಬರುವುದಿಲ್ಲ, ಗಾಳಿ ಕೂಡ ಸರಿಯಾಗಿ ಬರುವುದಿಲ್ಲ. ನೂರಾರು ಜನರು ನಲ್ಲಿಗಳ ಬಳಿ ಮಡಕೆಗಳನ್ನಿಟ್ಟುಕೊಂಡು

ಸಾಲಾಗಿ ನಿಂತಿರುತ್ತಾರೆ ಕಾರ್ಮಿಕರ ಹೆಣ್ಣು ಮಕ್ಕಳು. ಇಂತಹ ಸಂದರ್ಭಗಳಲ್ಲಿ ಅವರ ಕೆಲವು ಬೇಡಿಕೆಗಳನ್ನು ಪ್ರಬಲವಾಗಿ ಸಾಮರ್ಥ್ಯದಿಂದ ಅಲ್ಲಿ ಮಂಡಿಸಬೇಕಾಗುತ್ತದೆ. ಏಕೆಂದರೆ ಈ ನಗರ ದೊಡ್ಡ ಬೃಹತ್ ಕೈಗಾರಿಕೆ ನಗರವಾಗಿ ಬೆಳೆಯುತ್ತಿದೆ. ಇಲ್ಲಿ ಅನೇಕ ಲಕ್ಷ ಜನ ಕಾರ್ಮಿಕರು ಮನೆಗಳನ್ನು ಮಾಡಿಕೊಂಡು ವಾಸ ಮಾಡಬೇಕಾಗುತ್ತದೆ. ಅವರಿಗೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡಬೇಕಾಗುತ್ತದೆ. ಶ್ರೀಮಾನ್ ರಾಮಚಂದ್ರ ಅವರು ಈ ಸಭೆಯಲ್ಲಿ ಬಹಳ ಮುಂದುವರದಿದ್ದಾರೆ. ಏಕೆಂದರೆ ಅವರು ಚಿಕ್ಕಪೇಟೆಯಂತಹ ಕ್ಷೇತ್ರದಿಂದ ಗೆದ್ದು ಬಂದಿದ್ದಾರೆ. ಅವರಿಗೆ ಚುನಾವಣೆ ಯಲ್ಲಿ ಹೇಗೆ ಗೆಲ್ಲಬೇಕೆಂಬುದು ಚೆನ್ನಾಗಿ ಗೊತ್ತಿದೆ. ಕಾರ್ಮಿಕರನ್ನು ವಿಂಗಡಿಸಿ ಅವರ ನಡುವೆ ತಾವು ಗೆಲ್ಲುವುದನ್ನು ತಿಳಿದುಕೊಂಡಿದ್ದಾರೆ, ಕಾರ್ಮಿಕರ ಮೇಲೆ ಅವರಿಗೆ ಆಕ್ರೋಶವಿದೆ, ಅವರಿಗೆ ಚುನಾವಣೆಯಲ್ಲಿ ಓಟು ಕೊಡಬಾರದೆಂಬುದು ಅವರ ಅಭಿಪ್ರಾಯ. ಆದುದರಿಂದ ಅವರಲ್ಲಿ ಒಡಕು ತಂದು ಅವರನ್ನು ವಿಂಗಡಿಸಿ ಅಲ್ಲಿ ತಾವು ಗೆಲ್ಲಬೇಕೆಂಬ ಇಚ್ಛೆ ಅವರಿಗಿರಬಹುದು. ಆದುದರಿಂದ ಕೈಗಾರಿಕೆ ಕ್ಷೇತ್ರದಲ್ಲಿ ಕೂಲಿಗಾರರ ಹಕ್ಕನ್ನು ಈ ಮೂಲಕ ಕಸಿದುಕೊಳ್ಳುತ್ತಿದ್ದಾರೋ ಏನೋ ಎನಿಸುತ್ತದೆ. ಐ. ಎನ್. ಟಿ. ಯು. ಸಿ. ಯ ಪ್ರತಿನಿಧಿಗಳು ಸರಕಾರಕ್ಕೆ ಏನು ಹೇಳಿದ್ದಾರೋ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಕೂಲಿಗಾರರ ಹಿತರಕ್ಷಣೆ ಮಾಡುವುದಕ್ಕಾಗಿ ಇಂತಹ ನಾಲ್ಕಲ್ಲ ಆರು ಸೀಟುಗಳನ್ನು ಕೊಟ್ಟಿದ್ದರೂ ಚೆನ್ನಾಗಿತ್ತೆಂದು ಎನಿಸುತ್ತದೆ.

ಕೊನೆಯದಾಗಿ, ಈ ಮಸೂದೆಯಲ್ಲಿ ಕೆಲವು ತೆರಿಗೆಗಳನ್ನು ಹಾಕುವ ತಿದ್ದುಪಡಿಗಳನ್ನು ತಂದಿದ್ದಾರೆ. ಈಗಾಗಲೇ ಕಟ್ಟಡದ ತೆರಿಗೆಯನ್ನು ಹಾಕಿ ಅದನ್ನು ವಸೂಲು ಮಾಡುವುದು ಹೇಗೆ ಅಥವಾ ಅದಕ್ಕೆ ತಿದ್ದುಪಡಿಯನ್ನು ಮಾಡಬೇಕೆ ಎನ್ನುವ ಯೋಚನೆಯಲ್ಲಿ ಸರ್ಕಾರ ಇದೆ. ಹೀಗಿರುವಾಗ ಈ ತೆರಿಗೆ ಶೇಕಡ. 4 ಎಂದು ಹೇಳಿದರು. ಮತ್ತೆ ಖಾಲಿ ನಿವೇಶನಗಳ ಮೇಲೆ ಅವುಗಳ ಮಾರ್ಕೆಟ್ ಬೆಲೆಯ ಮೇಲೆ ಹಾಕುತ್ತೇವೆಂದು ಅದನ್ನು ತಿದ್ದುಪಡಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನೊಂದು ಸಲಹೆ ಕೊಡಬಯಸುತ್ತೇನೆ. ಈಗಾಗಲೇ ಬೆಂಗಳೂರು ನಗರವನ್ನು ಬಹಳ ದೊಡ್ಡದಾಗಿ ವಿಸ್ತರಿಸಬೇಕು, ಸ್ಯಾಟೆಲೈಟ್ ನಗರ ಮಾಡಬೇಕೆಂದು ಒಂದು ಮಾಸ್ಟರ್ ಪ್ಲ್ಯಾನ್ ತಯಾರಿಸುತ್ತಿದ್ದಾರೆ. ಆ ಸಂದರ್ಭದಲ್ಲಿ ಕ್ಯಾಬಿನೆಟ್ಟಿನ ಮುನಿ ವಿಚಾರ ಬಂದಿತ್ತು. ಅನೇಕರು ರೆವಿನ್ಯೂ ಜಮೀನನ್ನು ನಿವೇಶನ ಗಳಾಗಿ ಮಾಡಿ ಅದರಿಂದ ಅಧಿಕ ಲಾಭ ಪಡೆಯುವ ಕಾರ್ಯ ನಡೆಯುತ್ತಿದೆ. ಗ್ರಾಮಗಳನ್ನು ವಶಪಡಿಸಿಕೊಳ್ಳುವಾಗ, ಬೆಲೆ ಗೊತ್ತು ಮಾಡುವಾಗ ಒಂದು ರ್‍ಯಾಷನಲ್ ಕ್ರಮವನ್ನು ಗೊತ್ತುಮಾಡದಿದ್ದರೆ ಅದರಿಂದ ದೊಡ್ಡ ಅನಾಹುತವಾಗುತ್ತದೆ; ಸಾಮಾನ್ಯ ಜನರಿಗೆ ನಿವೇಶನಗಳು ಸಿಕ್ಕುವುದೇ ಇಲ್ಲ; ಅವರು ಮನೆಗಳನ್ನು ಕಟ್ಟಿ ವಾಸಮಾಡುವುದಕ್ಕೆ ಸಾಧ್ಯ ವಾಗುವುದಿಲ್ಲ. ಟ್ರಸ್ಟ್ ಬೋರ್ಡಿನವರು ಮಾಡುತ್ತಿರುವ ಸೈಟುಗಳು ಸಾಮಾನ್ಯ ಜನರಿಗೆ, ಮಧ್ಯಮವರ್ಗದ ಜನರಿಗೆ ಇನ್ನೂ ತಲಪಿಲ್ಲ. ಹೀಗಿರುವಾಗ ತೆರಿಗೆಯನ್ನು ಬರಿಯ ಆದಾಯ ದೃಷ್ಟಿಯಿಂದ ಹಾಕುತ್ತಿದ್ದೀರಿ. ಖಾಲಿ ಬಿದ್ದಿರುವ ನಿವೇಶನಗಳಲ್ಲಿ ಇಂತಹ ಮನೆ ಕಟ್ಟ ಬೇಕೆಂದು ಹೇಳಿಲ್ಲ. ಕೇವಲ ಆದಾಯ ದೃಷ್ಟಿಯಿಂದ ತೆರಿಗೆ ಹಾಕುತ್ತಿದ್ದಾರೆ. ಇದರಿಂದ ಬೆಲೆಗಳು ಕೂಡ ಹೆಚ್ಚು ಹೋಗುತ್ತವೆ; ಪ್ರತಿವರ್ಷವೂ ಸಾವಿರ ರೂಪಾಯಿ ಹೆಚ್ಚುತ್ತದೆ. ಅದನ್ನು ತಾವು ನೋಡುತ್ತಾ ಇದ್ದೀರಿ. ಒಳ್ಳೇ ಬೆಲೆ ಬರುತ್ತದೆ ಮುಂದೆ ಮಾರಾಟ ಮಾಡ ಬೇಕೆಂದು ಅನೇಕರು ಕೆಲವು ಸೈಟುಗಳನ್ನು ಇಟ್ಟಿದ್ದಾರೆ. ಇದನ್ನು ಸೂಕ್ಷ್ಮವಾಗಿ ಸಚಿವರು ವಿಚಾರ ಮಾಡಬೇಕು. ಯಾವ ಭೂಮಿ ಸ್ವಾಧೀನ ಪಡಿಸಿಕೊಳ್ಳಬೇಕು ಯಾವುದನ್ನು ಜನರ ಉಪಯೋಗಕ್ಕಾಗಿ ಮೀಸಲಾಗಿ ಇಡಬೇಕು ಇದನ್ನು ಗೊತ್ತು ಮಾಡುವುದು ಒಳ್ಳೆಯದು. ಇದನ್ನು ಮಾಡದೆ ಹೋದರೆ ಕೋಟ್ಯಾಧೀಶರು ಇನ್ನೂ ಹೆಚ್ಚು ಶ್ರೀಮಂತರಾಗುತ್ತಾರೆ. ಹಾಗು ಬಡವರು ಗಟಾರಕ್ಕೆ ಹೋಗುತ್ತಾರೆ. ಈ ಸಲಹೆ ಕೊಟ್ಟಿದ್ದೇನೆ. ಇದು ಎಷ್ಟರ ಮಟ್ಟಿಗೆ ಕಾರ್ಯಗತವಾಗುತ್ತದೆ ನನಗೆ ಗೊತ್ತಿಲ್ಲ.

ಕೊನೆಯದಾಗಿ ಒಂದು ಮಾತು ಹೇಳಬೇಕಾಗಿದೆ. ಈ ರೀತಿ ಮಸೂದೆಯನ್ನು ಪೀಸ್‌ಮೀಲ್ ಆಗಿ ತರುವುದು ಒಳ್ಳೆಯದಲ್ಲ. ದೂರ ದೃಷ್ಟಿಯನ್ನು ಇಟ್ಟುಕೊಂಡು ಒಂದು ಸಮಗ್ರವಾದ ಒಳ್ಳೇ ಕಾನೂನನ್ನು ತರಬೇಕು. ಇದನ್ನು ಚೆನ್ನಾಗಿ ವಿಮರ್ಶೆ ಮಾಡಬೇಕು. ಈ ಮಸೂದೆಯಲ್ಲಿ ಸಾಮಾನ್ಯವಾದ ಲೋಪದೋಷಗಳಿವೆ. ಸಾಮಾನ್ಯವಾಗಿ ಕಾರ್ಪೊರೇಷನ್ ಆಡಳಿತದಲ್ಲಿ ಸರಕಾರ ಹಸ್ತಕ್ಷೇಪ ಮಾಡಬಹುದು. ಮೇಯರ್ ಉಪಮೇಯರ್ ಅವರನ್ನು ತಮ್ಮ ಕೈ ಗೊಂಬೆಯಾಗಿ ಕುಣಿಯುವುದಕ್ಕೆ ಇದರಲ್ಲಿ ಅವಕಾಶ ಕೊಡದ ರೀತಿಯಲ್ಲಿ ಸರಿಪಡಿಸಬೇಕು. ಇದಲ್ಲದೆ ಕಾರ್ಪೊರೇಷನ್ ತನ್ನ ಕಾಲ ಮೇಲೆ ತಾನು ನಿಲ್ಲುವಂತೆ ಆಗಬೇಕು. ಈ ರೀತಿಯಾದರೆ ನಗರ ಆಡಳಿತ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇಂಥ ಒಂದು ಸಮಗ್ರವಾದ ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† Sri V. S. PATIL (Belgaum-I).—Sir, so far as the present amendments are concerned, I may be against the Congress Party, still I have to welcome this Bill. If there are any good measures we have to welcome and thank the Ministry for bringing them on the floor of this House. In clause 4, a new section 48 is to be substituted. According to the old section 48, it is 50 electoral divisions, that is the number so fixed by the Legislature as to the capacity of the Bangalore City. The same system is valid in Parliament. They have fixed the number of the Members of Parliament to be elected as well as of the Legislatures and the actual constitution of the constituencies is left to the office for being worked out. But, the maximum number which is to be elected was fixed by Parliament. Similarly, I think, it was done in the old section 48 *i.e.*, the number was fixed at 50. Why should we not fix the number to be elected for this august body taking into consideration the recent census of 1961? We know the actual population of the City on which these divisions are to be made. Why this power is given to the Government? If this power is given to the Government, as said by my friend just now, they will try to get their own people by creating smaller or bigger divisions; they may increase the number of seats and unnecssarily the Congress Party or the Congress Government is likely to come under attack. As far as possible, it is better for them to get the maximum number fixed and then for divisions, the actual division or ward they can do it. So, my suggestion is, that taking the pattern of Parliament we should fix the number. It is now 50, it may be increased to 60, 70 or 80. Whatever number which is deemed fit by the Government taking the census of 1961, that number should be fixed here instead of giving this absolute power to the Government. Sub-clause (c) of this section 48 says:

> "the number of seats which may be one or two, allotted to each division;"

So, 'one member—one constituency'. This is the basic principle which is followed in our country for all the elections. Before 1962 elections, there were these two-member constituencies, one for reserved and one for general in our country. That was not properly working and after gaining experience of the two general elections in the whole country, Parliament have thought it fit to fix this number, *viz.*, 'one-member one-constituency'. Of course, one-member one-constituency or one vote for one member is the devise to wipe out the minorities. If it is a multi-member constituency and a cumulative voting, the minorities get their representatives elected. But, when there is only one vote for one candidate, whether the constituency is for one or more seats, the minorities cannot be elected at all. When the Congress Party know that they can easily win the voters, they have abolished this cumulative voting and multi-member constituencies. Now, it has become practically a law that one-man for one-constituency. When this is the condition obtaining in the whole country and especially from the Ruling Party of the country,

I do not understand why the words 'one or two' has been mentioned in the sub-clause. That is against the present trend of elections throughout the whole of the country and I think that the principle of one-man one-constituency may be followed. In sub-clause (d), here a mention is made for the reservation of Scheduled Castes and the divisions in which such seats shall be reserved. So far as Parliament is concerned, according to the Parliamentary Act, there is a further wording that these seats for reservation for Scheduled Castes and Scheduled Tribes must be done in a constituency where the population of this particular caste is comparatively higher than in the other constituencies. Here also, something must be mentioned that such constituency is to be reserved, where compared to other constituencies, these scheduled caste people are more in number. But, for that prescription we are not prepared to allow the Government to take that power. Let it be under the Statute. I am mentioning the Parliamentary Act because it must be done by the Parliament or by this body in this case.

Supposing to-morrow the Government fixes the scheduled caste seat in a predominently advanced community. Even if there be not even one member of scheduled caste or tribe residing there, then it cannot be challenged. Why are we going to reserve seats? Because we want representatives of that community to come here, not a man belonging to that caste. This is the principle underlying it that the scheduled caste and scheduled tribe people must send their own representatives, and not a representative of other parties, other castes and other men who will say that the man belongs to that community. That is not the basic idea while reservations are made. That is why there is the specific wording that where the scheduled caste people are comparatively more in any constituency, there a seat must be reserved. Otherwise, the very purpose for which we are reserving seats will be frustrated and some person who is after some job and some person who is under the thumb and control of the Congress Party will be nominated for this place. We should not give scope for that purpose. An elected member of that community must be a real representative and elected by those people as far as possible. That is why I should like to suggest to see whether they want to follow the principls enunciated by the Parliament in this case also or they want to arrogate the powers to themselves.

Then I refer to clause 8. Amendment of section 57.

> "In sub-section (1) of section 57 of the principal Act, clause (g) shall be omitted."

If we refer to item (g):

> "is declared to be disqualified by a judicial order passed under section:"

Section 70 says:

> "70. Order of disqualification.—Every person convicted of an offence punishable under section 69 or under Chapter

(SRI V. S. PATIL)

IX-A of the Indian Penal Code (Central Act XLV of 1860) shall be disqualified from voting or from being elected in any election to which this Act......"

I do not know why this disqualification is to be removed from the present Act. So, if persons have been convicted of offences under the Indian Penal Code or under this Act for election offences, then it is natural that those persons must be disqualified from being the members or from remaining as members of the body; but I do not understand why that has to be deleted.

Further amendments are proposed on page 8.

In sub-section (2) (*a*):

"......by the court is satisfied—that no such corrupt practice was committed at the election by the candidate or his election agent/and every such corrupt practice was committed contrary to the orders and without the consent of the candidate or his election agent."

Here two conditions are mentioned. The corrupt practice was contrary to the orders and without the consent. I submit one of them is quite sufficient. Supposing a candidate has absolutely no knowledge of the corrupt practice committed by some people other than the election agent. Then why this other condition 'contrary to the orders'. This will negative the whole purpose for which this Act has to be enacted. Unless these two things put together are proved, execution cannot be claimed by him. So according to me, if there is a contrary order given by the candidate or the election agent or if it is done without his knowledge or the knowledge of his election agent, in both cases, they must be exempted from the liability of corrupt practice. If only one of them is proved, they cannot get exemption. The very intention for which they introduce exemption clause will be defeated.

On page 10, item (3) of new section 69F:

"the appeal by a candidate or his agent or by any other person with the consent of a candidate or his election agent to vote or refrain from voting for any person on the ground of his religion, race, caste, community or language or the use of, or appeal to, religious symbols or the use of, or appeal to, national symbols, such as the national flag or the national emblem......"

Why should we not include the words 'national leaders'. The Congress party is thriving upon Mahatma Gandhi and Pandit Nehru. We treat these two persons above all parties and principles. These two persons are national heroes who are practically worshipped by every one. So I should like to suggest that in addition to 'national emblem'

and 'national flag', 'national heroes', that is, especially Mahatma Gandhi and Pandit Nehru may be included. Their names or photographs should not be put by any candidate to further his cause of the election.

[MR. SPEAKER in the Chair].

He must come on his own merit or on the principles of his party. Mahatma Gandhi was against the continuation of the Congrese Party itself. He wanted it to be dissolved. The trend now has been to use his name to get into power. In fairness, let us fight on basic principles of democracy and explain our point of view to the electorate and not trade upon emotional appeals to capute votes. These two persons are also valuable just like our national flag and national emblem. I suggest that these two words might be added there.

5-30 P.M.

Sub-clause 7 at page 11 seeks to prevent serving of intoxicating liquors at meetings. I do not know why this clause has been included. In foreign countries there are cocktails and drinking parties but that is not the practice in our country. Our people take drinks; there is no doubt about it. Wherever there is prohibition, illicit liquor or licit liquor overflows.

MR. SPEAKER.—The Hon'ble Member must finish quickly. The House wanted to discuss at 6 P.M., in my chambers,. the dispute pending in the Supreme Court. A circular has been issued to that effect.

SRI V. S. PATIL.—In the next sub-clause 8, there is prohibition of taking any assistance from Government servants or persons in the service. I suggest that Ministers and Deputy Ministers should also be included because they are also servants of the State receiving salary from the consolidated fund.

There is an omnibus clause which says "any other practice which the Government may by rule specify to be a corrupt practice." This gives wide power to Government. We have criticised Government several times and I do not want Government to take further blame by taking too much power in their hands. What the corrupt practices are, have been defined in the clause and I do not know why this blanket clause has been introduced.

ಶ್ರೀ ವೈ. ರಾಮಚಂದ್ರ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ ಅದಕ್ಕೆ ಉತ್ತರ ಕೊಟ್ಟರೆ ಸರಿಹೋಗುತ್ತದೆ ಎಂದು ಕಾಣುತ್ತದೆ. ಮೊದಲನೆಯದಾಗಿ ಶ್ರೀಮಾನ್ ದೇವಯ್ಯನವರು ಪುನಃ ಚುನಾವಣೆ ನಡೆಸುವುದು ಬೇಡ ಯಾರು ಹೈಯಸ್ಟ್ ಇರುತ್ತಾರೋ ಅವರೇ ಇರಬೇಕೆಂದು ಹೇಳಿದರು ಆ ಕ್ರಮವನ್ನು ಅನುಸರಿಸುವುದಕ್ಕೆ ಆಗುವುದಿಲ್ಲ. ನಂತರ ಶ್ರೀಮಾನ್ ಪುಟ್ಟಯ್ಯನವರು ಹೆಣ್ಣು ಮಕ್ಕಳಿಗೆ ಮುನಿಸಿಪಾಲಿಟಿಗಳಲ್ಲಿ ಪ್ರತ್ಯೇಕ ಸ್ಥಾನಗಳನ್ನು ಕೊಟ್ಟಿದ್ದಾರೆ, ಆದರೆ ಇಲ್ಲಿ ಕೊಟ್ಟಿಲ್ಲ ಎಂದು ಹೇಳಿದರು, ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಈಗಾಗಲೇ ಜನರಲ್ ಸೀಟ್‌ನಿಂದಲೇ ಹೆಣ್ಣು ಮಕ್ಕಳು ಚುನಾಯಿತರಾಗಿ ಬರುತ್ತಾ ಇದ್ದಾರೆ. ಅಸೆಂಬ್ಲಿ ಮತ್ತು

(ಶ್ರೀ ವೆಂ. ರಾಮಚಂದ್ರ)

ಪಾರ್ಲಿಮೆಂಟ್‍ಗಳಿಗೆ ಯಾವ ತರಹ ರಿಸರ್ವೇಷನ್ ಕೂಡ ಇಲ್ಲ ಆದರೂ ಕೂಡ ಅವರು ಅಲ್ಲೂ ಜನರಲ್ ಸೀಟ್‍ನಲ್ಲಿ ಚುನಾಯಿತರಾಗಿ ಬರುವುದಕ್ಕೆ ಅವಕಾಶವಿದೆ, ಅದೇ ಪದ್ಧತಿಯನ್ನೇ ಇಲ್ಲಿ ಅನುಸರಿಸಿದ್ದೇವೆ. ನಂತರ ಕಾರ್ಪೊರೇಷನ್‍ನಲ್ಲಿ ಕೆಲವು ನಂಬರ್ ಅಫ್ ಸೀಟ್ಸ್‌ನ್ನು ರಿಸರ್ವ್ ಮಾಡಬೇಕೆಂದು ಹೇಳಿದರು, ರಿಸರ್ವ್ ಮಾಡಿದರೆ ಸಾಲದು ಮತ್ತೆ ತಮ್ಮ ಮುಂದೆ ಬರಬೇಕಾಗುತ್ತದೆ, ಕಾನೂನಿನಲ್ಲಿ 50 ಸೀಟ್ಸ್ ಅಂತ ಹೇಳಿ ಗೊತ್ತುಮಾಡಲಾಗಿದೆ ಅದನ್ನು ಬದಲಾವಣೆ ಮಾಡಬೇಕಾದರೆ ತಮ್ಮ ಮುಂದೆ ಬರಬೇಕಾಗುತ್ತದೆ. 1949ರಲ್ಲಿ ಈ ಕಾನೂನನ್ನು ತಂದಾಗ ಬೆಂಗಳೂರಿನ ಜನಸಂಖ್ಯೆ 5-6 ಲಕ್ಷ ಇತ್ತು, ಈಗ 12-13 ಲಕ್ಷ ಆಗಿದೆ. ಜನಸಂಖ್ಯೆ ಜಾಸ್ತಿಯಾಗುತ್ತಾ ಇದ್ದಹಾಗೆ ಹೆಚ್ಚು ಹೆಚ್ಚು ಪ್ರದೇಶ ಇಲ್ಲಿಗೆ ಸೇರಿದ ಹಾಗೆ ಅಲ್ಲಿರತಕ್ಕ ಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕಾದರೆ ಅದನ್ನು ತಮ್ಮ ಮುಂದೆ ತರಬೇಕಾಗುತ್ತದೆ. ಆದ್ದರಿಂದ ಅವರಿಗೆ ಪ್ರಾಪರ್ ರೆಪ್ರಸೆಂಟೇಷನ್ ಕೊಡುವುದಕ್ಕೆ ಇದನ್ನು ಇಟ್ಟುಕೊಂಡಿದ್ದೇವೆ. ಕೆಲವರು ಒಂದು ಅಥವಾ ಎರಡು ಸೀಟು ಎಂದು ಹೇಳಿದರು. ಒಂದು ಕಡೆ ಒಂದು ಸೀಟು ಮತ್ತೊಂದು ಕಡೆ ಎರಡು ಸೀಟು ಎಂದು ಮಾಡುವುದಕ್ಕಾಗುವುದಿಲ್ಲ. ಇದುವರೆಗೂ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಇತ್ತು ಇನ್ನು ಮುಂದೆ ಎಲ್ಲರಿಗೂ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಬೇಕಾಗುತ್ತದೆ ಇಲ್ಲದೇ ಇದ್ದರೆ ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಬೇಕಾಗುತ್ತದೆ. ಹಾಗಿಲ್ಲದ ಪಕ್ಷದಲ್ಲಿ ಕಾನೂನಿಗೆ ವಿರುದ್ಧವಾಗುತ್ತದೆ. ಅನೇಕರ ಅಭಿಪ್ರಾಯ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯೂಯನ್ಸಿ ಮಾಡಬೇಕೆಂದು ಇದೆ ಆದ್ದರಿಂದ ಆ ಪ್ರಕಾರ ಕಾನೂನು ಬರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಎಲೆಕ್ಷನ್ ರೂಲ್ಸ್ ಪ್ರಕಾರ ಪನಿಷ್‍ಮೆಂಟ್ ಜಾಸ್ತಿಯಾಯಿತು ಎಂದು ಹೇಳಿದ್ದಾರೆ. 1961 ರಿಂದ ಪೀಪಲ್ಸ್ ರೆಪ್ರಸೆಂಟೇಷನ್ ಆಕ್ಟ್ ಏನಿದೆ ಅದನ್ನೇ ಇಲ್ಲಿ ಅಳವಡಿಸಿದ್ದೇವೆ. ಶ್ರೀ ಮುಕ್ಕಣ್ಣಪ್ಪನವರು ಕಾನೂನುಗಳನ್ನು ಪೀಸ್‍ಮೀಲಾಗಿ ತರುತ್ತಿದ್ದಾರೆ ಒಟ್ಟಾಗಿ ತರುತ್ತಿಲ್ಲ, ಇದಕ್ಕೆ ಕಾರಣವೇನು ಎಂದು ಕೇಳಿದರು. ಈಗಾಗಲೇ 5 ವಿಭಾಗಗಳಿಗೂ ಸೇರಿ ಟೌನ್ ಅಂಡ್ ಸಿಟಿ ಮುನಿಸಿಪಾಲಿಟೀಸ್ ಆಕ್ಟ್ ತರಲಾಗಿದೆ. ಆದೇ ರೀತಿಯಲ್ಲಿ ಇಡೀ ದೇಶಕ್ಕೆ ಅನ್ವಯವಾಗುವಂತೆ ಇತರ ಮಸೂದೆಗಳನ್ನೂ ತರಲಾಗುವುದು. ಅರ್ಧ ಯೂನಿಫಾರಂ ಆಕ್ಟ್‍ಗಳು ಆಗಿವೆ. ಆದಷ್ಟು ಜಾಗ್ರತೆ ಉಳಿದ ಯೂನಿಫಾರಂ ಆಕ್ಟುಗಳನ್ನು ತಮ್ಮ ಮುಂದೆ ಇಡುತ್ತೇವೆ. ರಿಸರ್ವೇಷನ್ ಮಾಡಿರುವ ಕಡೆ ಇತರರು ಕಂಟೆಸ್ಟ್ ಮಾಡಲು ಸಾಧ್ಯವಿಲ್ಲದಂತೆ ಮಾಡಲಾಗಿದೆ. ಶ್ರೀ ವೆಂಕಟೇಗೌಡರು ಇತರ ಕಡೆ ಇರುವ ಆಕ್ಟ್‌ನ್ ಕಾಪಿ ಮಾಡಿದ್ದಾರೆ, ಇದು ತಿದ್ದುಪಡಿ ಮಸೂದೆಯಲ್ಲ ಎಂದು ಹೇಳಿದರು. ಹಾಗಲ್ಲ, ಕಾನೂನು ಬದ್ಧವಾಗಿ ಕಾರ್ಪೊರೇಷನ್ನಿಗೆ ಲಗತ್ತಾಗಿರುವ ಪಂಚಾಯಿತಿ ಪ್ರದೇಶಗಳನ್ನು ಸೇರಿಸಿಕೊಳ್ಳಲು ಅವಕಾಶ ಮಾಡಿದ್ದೇವೆ. ಹಿಂದೆ ಕಾರ್ಪೊರೇಷನ್ ಇದ್ದರೂ ಹರಿಜನರು ಜಾಸ್ತಿ ಇರುವ ಕಡೆ ಅವರ ಜನಸಂಖ್ಯೆಗನುಗುಣವಾಗಿ ಸೀಟುಗಳನ್ನು ರಿಸರ್ವ್ ಮಾಡಲು ಬೇಕಾದ ನಿಯಮವನ್ನು ಅಳವಡಿಸಿದ್ದೇವೆ. ಆಮೇಲೆ ಸೀಟು ನಿಗದಿ ಮಾಡದೇಕೆಂದು ಹೇಳಿದರು, ಹಾಗೆ ಕಾನೂನಿನಲ್ಲಿ ಮಾಡಿದರೆ ಕಷ್ಟವಾಗುತ್ತದೆ. ಸಿಂಗಲ್ ಮೆಂಬರ್ ಕಾನ್‍ಸ್ಟಿಟ್ಯೂಯನ್ಸಿ ಮತ್ತು ಡಬ್ಬಲ್ ಮೆಂಬರ್ ಕಾನ್‍ಸ್ಟಿಟ್ಯೂಯನ್ಸಿ ಮಾಡಬೇಕೆಂದು ಹೇಳಿದರು, ಅದು ಸಾಧ್ಯವಿಲ್ಲ, ಮಾಡಿದರೆ ಅವೆರಡರಲ್ಲಿ ಯಾವುದಾದರೂ ಒಂದನ್ನು ಮಾಡುತ್ತೇವೆ. ಲ್ಯಾಂಡ್‍ಮೇಲೆ ತೆರಿಗೆ ಹಾಕಿರುವುದು ಸರಿಯಲ್ಲ ಎಂದು ಹೇಳಿದರು. ವಾರ್ಷಿಕ ಉತ್ಪತ್ತಿಯಮೇಲೆ ತೆರಿಗೆ ಹಾಕಬೇಕೆಂದು ಹೇಳಿದರು, ಮನೆಮೇಲೆ ಅಸೆಸ್ ಮಾಡಬಹುದು. ಆದರೆ ಖಾಲಿ ಜಮೀನಿನಮೇಲೆ ಹಾಗೆ ಮಾಡುವುದಕ್ಕಾಗುವುದಿಲ್ಲ. ಸೈಟಿನ ಬೆಲೆ ಒಂದು ಕಡೆ ಕಡಮೆಯಿದ್ದರೆ ಇನ್ನೊಂದು ಕಡೆ ಜಾಸ್ತಿ ಇರುತ್ತದೆ. ಸೇಕಡ 4 ರಂತೆ ಅದರಮೇಲೆ ತೆರಿಗೆ ಹಾಕಿದರೆ ಸೈಟಿನ ಬೆಲೆ ಒಂದು ಸಾವಿರ ರೂಪಾಯಿ ಇದ್ದರೆ 4 ರೂಪಾಯಿ ಬರುತ್ತದೆ. ಜೊತೆಗೆ ಹಾಗೆ ಹಾಕಿದರೆ ಜಾಗ್ರತ ಮನೆ ಕಟ್ಟುತ್ತಾರೆ. ಅನೇಕರು 8–10 ವರ್ಷ ಸೈಟನ್ನು ಹಾಗೆಯೇ ಖಾಲಿಬಿಟ್ಟುಕೊಂಡು ಹೆಚ್ಚು ಬೆಲೆ ಬಂದಾಗ ಮಾರಿ ಲಾಭ ಸಂಪಾದಿಸುತ್ತಾರೆ. ಅದಕ್ಕಾಗಿ ಅವರೇನೂ ಖರ್ಚ ಮಾಡಿರುವುದಿಲ್ಲ. ಆದರೆ ಆ ಜಾಗದಲ್ಲಿ ಮನೆಯಾದರೆ ಕಾರ್ಪೊರೇಷನ್ ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕು. ಖಾಲಿ ಸೈಟಿಗೆ ತೆರಿಗೆ ಹಾಕಿದರೆ ಜಾಗ್ರತೆ ಮನೆಕಟ್ಟಲು ಅವಕಾಶವಾಗುತ್ತದೆ ಎಂಬ ದೃಷ್ಟಿಯಿಂದ ಹಾಕಲಾಗಿದೆ. 10 ರೂಪಾಯಿಗಳಿಗೆ ಕಡಮೆ ಕಂದಾಯ ಕೊಡುವ ಜಾಗ ಬೆಂಗಳೂರಿನಲ್ಲಿಲ್ಲ. ಸಾವಿರಾರು ರೂಪಾಯಿ ಬೆಲೆ ಬಾಳುತ್ತವೆ. ಆ ದೃಷ್ಟಿಯಿಂದ 10 ರೂಪಾಯಿ ವಿಧಿಸಲಾಗಿದೆ. ಅದಕ್ಕಿಂತ ಕಡಮೆ ಮಾಡಿದರೆ ವಸೂಲಿ ಮಾಡಲು ಚಾರ್ಜು ವಗೈರೆಗೆ ಖರ್ಚು ಹೆಚ್ಚಾಗುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ರಿಯಾಯಿತಿ ಕೊಡಬೇಕೆಂದು ಹೇಳಿದ್ದಾರೆ, ಅದಕ್ಕೆ ಅವಕಾಶವಿದೆ.

ಅಮೆನಿಟೀಸ್ ಕೊಟ್ಟಿರುವುದನ್ನು ನೋಡಿ ತೆರಿಗೆ ಹಾಕುವುದು, ಹೊಸದಾಗಿ ಹಾಕುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಅವಕಾಶ ಮಾಡಿದ್ದೇವೆ, ತಾವೇನೂ ಚಿಂತೆಮಾಡಬೇಕಾಗಿಲ್ಲ.

ಸ್ಪೆಷಲ್ ಕೌನ್ಸಿಲರುಗಳಿಗೆ ಪ್ರಾವಿಷನ್ ಇದೆ, ನಾಮಿನೇಷನ್ ಮಾಡುವುದು ಬೇಡ ಎಂದು ಹೇಳಿದರು. ಆದರೆ ಬೆಂಗಳೂರಿನಲ್ಲಿ ಮಿಲಿಟರಿ ಏರಿಯಾ ಇದೆ, ಅಲ್ಲಿಗೆ ಬೇಕಾದ ರಸ್ತೆ ವಗೈರೆ ಅವರಿಗೆ ಸಂಬಂಧಪಟ್ಟ ಪ್ರಾಬ್ಲಂಗಳಿರುವುದರಿಂದ ಅದನ್ನು ತಿಳಿದು ತೀರ್ಮಾನಮಾಡಲು ಅವಕಾಶ ಮಾಡುವುದಕ್ಕಾಗಿ ಅವರಿಗೆ ಪ್ರಾತಿನಿಧ್ಯ ಕೊಟ್ಟಿದೆಯೇ ಹೊರತು ಇನ್ನೇನೂ ಇಲ್ಲ. ಅವರಿಗೆ ಓಟು ಮಾಡುವ ಅಧಿಕಾರವಿಲ್ಲ. ತೆರಿಗೆ ಜಾಸ್ತಿ ಎಂದು ಹೇಳಿದರು. ಈಗ ಜಾಸ್ತಿ ಮಾಡಿಲ್ಲ, ಸೇಕಡ ಹನ್ನೆರಡೂವರೆಯಿಂದ 16 ರವರೆಗೆ ಹಾಕಲು ಈಗ ಅವಕಾಶವಿದೆ. ಕಾರ್ಪೊರೇಷನ್‌ನವರು ಶೇಕಡ 25ರವರೆಗೆ ಅವಕಾಶ ಕೊಡಬೇಕೆಂದು ಕೇಳಿದರು. ಆದರೆ ನಾವು 20 ರವರೆಗೆ ಮಾತ್ರ ಅವಕಾಶ ಮಾಡಿದ್ದೇವೆ.

ಕಾರ್ಪೊರೇಷನ್ ಸದಸ್ಯರು ಬಡವರಾಗಿ ಬಂದು ಬೇಕಾದಷ್ಟು ಆಸ್ತಿ ಮಾಡಿಕೊಳ್ಳುತ್ತಾರೆ ಎಂದು ಶ್ರೀ ರೇವಣಸಿದ್ದಪ್ಪನವರು ಹೇಳಿದರು. ಅವರಿಗೆ ಸಿಟಿಂಗ್ ಫೀಜಿಲ್ಲ, ಸಂಬಳವಿಲ್ಲ, ಟಿ. ಎ. ಇಲ್ಲ. ಉಚಿತವಾಗಿ ಕೆಲಸಮಾಡುತ್ತಾರೆ. ಅನೇಕರು ಚೆನ್ನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಮೇಯರುಗಳು ಚೆನ್ನಾಗಿ ಕೆಲಸಮಾಡದಿದ್ದರೆ ಈ ಬೆಂಗಳೂರು ಪಟ್ಟಣ ಇಷ್ಟು ಸುಂದರವಾಗಿ ಬೆಳೆಯುತ್ತಿರಲಿಲ್ಲ. ಏನೂ ತೆಗೆದುಕೊಳ್ಳದೆ ಕೆಲಸ ಮಾಡುವವರಿಗೆ ಪ್ರೋತ್ಸಾಹ ಕೊಡಬೇಕೇ ಹೊರತು ಆಸ್ತಿಮಾಡಿಕೊಳ್ಳುತ್ತಾರೆ ಎಂದು ಅನುಮಾನ ಪಡುವುದು ನ್ಯಾಯವಲ್ಲ. ಶ್ರೀ ಗೋಪಾಲಗೌಡರು ಸ್ಥಾನಗಳ ಸಂಖ್ಯೆಯನ್ನು ನಿಗದಿ ಮಾಡಬೇಕೆಂದು ಹೇಳಿದರು. ಹಾಗೆ ಮಾಡಲು ತೊಂದರೆಯಿದೆ. ಲೇಬರ್‌ಗೆ ಪ್ರಾತಿನಿಧ್ಯ ಕೊಡಬೇಕೆಂದು ಹೇಳಿದರು. ಅನೇಕ ಮಿಲ್ಲುಗಳವರು ಜನರಲ್ ಸೀಟು ಇರುವ ಕಡೆ ಕಂಟೆಸ್ಟ್ ಮಾಡಿ ಬರುತ್ತಿದ್ದಾರೆ. ಒಂದು ಕಡೆ ಓಟು ಮಾಡುವವರಿಗೆ ಬೇರೆ ಕಡೆ ಅವಕಾಶ ಕೊಡುವುದು ಸರಿಯಲ್ಲ. ಅಸೆಂಬ್ಲಿ ಮತ್ತು ಪಾರ್ಲಿಮೆಂಟಿಗೆ ಚುನಾವಣೆಯಾಗುವ ರೀತಿ ವ್ಯವಸ್ಥೆ ಮಾಡಿದ್ದೇವೆ. ಶ್ರೀ ಪಾಟೀಲರು ಡಿವಿಜನ್ನುಗಳನ್ನು ಸಣ್ಣದು ದೊಡ್ಡದು ಮಾಡಿದ್ದೀರಿ, ಯೂನಿಫಾರಂ ಇಲ್ಲ ಎಂದು ಹೇಳಿದರು, ಸಾಧ್ಯವಾದರೆ ಮಾಡೋಣ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಅವನ್ನು ಗಮನದಲ್ಲಿ ಇಟ್ಟುಕೊಂಡು ಅವಶ್ಯಕವಾದರೆ ತಿದ್ದುಪಡಿ ಮಾಡುತ್ತೇವೆ, ಈ ಮಸೂದೆಗೆ ಎಲ್ಲರೂ ಒಪ್ಪಿಗೆ ನೀಡಬೇಕು ಎಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That the Bangalore Municipal Corporation (Amendment) Bill, 1964 be taken into consideration.

The motion was adopted.

Mr. SPEAKER.—Now we will take up clause by clause consideration of the Bill. Clauses 2 to 11......

Sri SIDDAIAH KASHIMATH.—In view of the answer given by the Hon'ble Deputy Minister I do not want to move the amendments tanding in my name.

Mr. SPEAKER.—The question is:

"That Clauses 2 to 13, both inclusive, stand part of the Bill.

The motion was adopted.

Clauses 2 to 13, both inclusive, were added to the Bill.

CLAUSE 14

Sri Y. RAMACHANDRA.—I beg to move :

'That in the new section 68, after sub-section (4), the following sub-section shall be inserted, namely.—

"(5) Every election petition shall be tried as expeditiously as possible and endeavour shall be made to conclude the trial within six months from the date of presentation of the election petition under sub-section (1).''

Mr. SPEAKER.—Amendment moved :

'That in the new section 68, after sub-section (4), the following sub- section shall be inserted, namely.—

"(5) Every election petition shall be tried as expeditiously as possible and endeavour shall be made to conclude the trial within six months from the date of presentation of the election petition under sub-section (1).'"

† Sri G. V. GOWDA.—The amendment that is brought here is good and a similar provision is found in other Acts also. In spite of the provision, it becomes very difficult for election tribunals to decide the cases within six months. It is not possible because even some of the election petitions pending against Hon'ble Members and especially one against Mr. Gadag is not yet disposed of even after a lapse of 2½ years. So, it is not practicable to complete or decide election petitions within six months. So, it is desirable that it be extended by another six months and within one year as far as possible endeavour should be made to complete it. What is the use of having a provision in a particular enactment which is not possible to work out and which is impracticable ?

Mr. SPEAKER.—I will put it to the vote of the House. The question is :

"That in the new section 68, after sub-section (4), the following sub-section shall be inserted, namely, (5) Every election petition shall be tried as expeditiously as possible and endeavour shall be made to conclude the trial within six months from the date of presentation of the election petition under sub-section (1)".

The anendment was adopted.

Mr. SPEAKER.—The question is :

"That clause 14, as amended, stand part of the Bill".

The motion was adopted.

Clause 14, as amended, was added to the Bill.

CLAUSES 15 TO 23

Mr. SPEAKER.—There are no other amendments. The question is :

"That clauses 15 to 23, both inclusive, stand part of the Bill."

The motion was adopted.

Clauses 15 to 23, both inclusive, were added to the Bill.

Mr. SPEAKER.—The question is :

"That clause 1, the Title and the Preamble stand part of the Bill"

The motion was adopted.

Clause 1, the Title and the Preamble were added to the Bill.

Motion to pass

Sri Y. RAMACHANDRA.—I beg to move :

"That the City of Bangalore Municipal Corporation (Amendment) Bill, 1964, as amended, be passed."

Mr. SPEAKER.—The question is :

"That the City of Bangalore Municipal Corporation (Amendment) Bill, 1964, as amended, be passed."

The motion was adopted.

THE MYSORE (REGISTRATION OF DOCUMENT) VALIDATION BILL, 1964 AS PASSED BY THE LEGISLATIVE COUNCIL.

Motion to consider.

Sri MAQSOOD ALI KHAN (Deputy Minister for Mines and Geology) [on behalf of SRI M. V. KRISHNAPPA (Minister for Revenue)].—Sir, I beg to move.

"That the Mysore (Registration of Documents) Validation Bill, 1964, as passed by the Legislative Council, be taken into consideration."

Mr. SPEAKER.—Motion moved :

"That the Mysore (Registration of Documents) Validation Bill, 1964, as passed by the Legislative Council, be taken into consideration."